ಪ್ರಮಾಣ 3′ 6″ × 2′.

1 ಶ್ರೀನಮಸ್ತುಂಗಸಿರಶ್ಚುಂಬಿಚಂದ್ರಚಾಮರಚಾರವೇ | ತ್ರೈಲೋಕ್ಯನಗರಾರಂಭ
2 ಮೂಲಸ್ತಂಭಾಯಸಂಭವೇ || ಗಣಪತೇನಮಃ . . .
3 ಸಮಧಿಗತಪಂಚಮಹಾಸಬ್ದಮಹಾಮಣ್ಡಳೇಶ್ವರತ್ರಿಭುವನ . . . .
4 ಜಬಳವೀರಗಂಗಹೊಯ್ಸಣಬಿಟ್ಟಿದೇವರುಂ . . . .
5 ಶ್ವರಂಹಡು . ಳ್ವ . ದಬಡಗಲುಹೆದ್ದೊಱೆಪರ್ಯ್ಯನ್ತದುಷ್ಟನಿಗ್ರಹಸಿಷ್ಟಪ್ರತಿಪಾ
6 ಳನದಿಂಸುಖಸಂಕಥಾವಿನೋದದಿಂರಾಜ್ಯಂಗೆಯ್ಯುತ್ತಮಿರೆತತು . . . . .
7 ಸಮಧಿಗತಪಂ[ಚ]ಮಹಾಸಬ್ದಮಹಾಮಂಡಳೇಸ್ವರ . . . . ಮಾ
8 ಳಚಿದೇವೀಲಬ್ಧವರಪ್ರಸಾದಾಸಾದಿತಸ . . . . ಲಕ್ಷ್ಮೀ . ನ .
9 ನೀಳಧ್ವಜವಿರಾಜಮಾನಂದಾನಕಾನೀನಂಮಲಳಿ . . . . ಮಾ
10 . . ಮಾರ್ತ್ತಣ್ಡವಿಜಯದೋರ್ದ್ದಂಡಫಣಿರಾಜ . . . .

[11] ಯೋಗಕಾಶರಸೌರ್ಯ್ಯಪಾರಾಯಣ . . . . ಕರಗಸವಿರಳ . . . .
[12] ನಾಮಾದಿಸಮಸ್ತಪ್ರಶಸ್ತಿಸಹಿತಂಶ್ರೀಮತು . . . . . . ಸಳುವಾಯಯ್ಯನ
[13] ತಮ್ಮಮಲ್ಲರಸರುಮುರೆ . . ನೂ . . . .
[14] ವ್ಯಮನಾಳುತ್ತಮಿರೆ . . ಪುರಸೀ . . . .

(ಮುಂದೆ ಸವೆದು ಹೋಗಿದೆ)

54

ಅದೇ ಗ್ರಾಮದ ವೀರಭದ್ರದೇವಸ್ಥಾನದ ಪಶ್ಚಿಮಕಡೆ ಪ್ರಾಕಾರದಲ್ಲಿ ಬಿದ್ದಿರುವ ಕಲ್ಲು.

ಪ್ರಮಾಣ 5′ × 2′ 3″.

[1] ಶ್ರೀಮತ್ಪರಮಗಂಭೀರಸ್ಯಾದ್ವಾದಾಮೋಘಲಾಂಥನಂಜೀಯಾತ್ತ್ರೈಲೋಕ್ಯನಾಥಸ್ಯಸಾ
[2] ಸನಂಜಿನಸಾಸನಂ || ಸ್ವಸ್ತಿಶ್ರೀಜೈನಧರ್ಮ್ಮ . . . .
[3] ಸ್ವಸ್ತಿಸಮಧಿಗತಪಂಚಮಹಾಸಬ್ದಮಹಾಮಂಡಳೇಸ್ವರಂದ್ವಾರಾವತೀಪುರವರಾ
[4] ಧೀಸ್ವರಯಾದವಕುಳಾಂಬರದ್ವಿಮಣಿಸಮ್ಯಕ್ತಚೂಡಾಮಣಿಶ್ರೀಮತುತ್ರಿಭುವನಮಲ್ಲ
[5] ವೀರಗಂಗ . . . . ತಳಕಾಡುಗೊಣ್ಡ
[6] . . . . ಲು . . ವರ್ದ್ಧನಂ | ನೀಳಾ

(ಮುಂದೆ ಸವೆದು ಹೋಗಿದೆ)

55

ಅದೇ ಗ್ರಾಮಕ್ಕೆ ಉತ್ತರ ಪಾಳುದೇವಸ್ಥಾನದ ಬಳಿ ನಟ್ಟ ಕಲ್ಲು.

ಪ್ರಮಾಣ 4′ 2″ × 2′ 4″.

[1] ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ || ತ್ರೈ
[2] ಲೋಕ್ಯನಗರಾರಂಭಮೂಲಸ್ತಂಭಾ
[3] ಯಶಂಭವೇ || ಶ್ರೀಗಣಪತ್ಯಾಯನಮಃ |
[4] ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂದ್ವಾರಾವತೀಪುರವರಾಧೀಶ್ವರಂ
[5] ಯಾದವಕುಳಾಂಬರದ್ಯುಮಣಿಸಮ್ಯಕ್ತಚೂಡಾಮಣಿಶ್ರೀಮತ್ತ್ರಿಭುವನಮಲ್ಲತಳಕಾಡುಗೊಂಡಭು
[6] ಜಬಳವೀರಗಂಗಶ್ರೀವಿಷ್ಣುವರ್ದ್ಧನಹೊಯ್ಸಳಪ್ರತಾಪನಾರಸಿಂಗದೇವರುಮೂಡಲುನಂಗಲಿತೆಂಕರಾ
[7] ಮೇಶ್ವರಂಹಡುವಲಾಳ್ವರಖೇಡಬಡಗಹೆದ್ದೊರ್ಱೆಪರ್ಯ್ಯಂತಂಗಂಗವಾಡಿತೊಂಭತ್ತಱುಸಾಸಿರಮಂ ದುಷ್ಟನಿ
[8] ಗ್ರಹಶಿಷ್ಟಪ್ರತಿಪಾಳನದಿಂದೋರಸಮುದ್ರದನೆಲೆವೀಡಿನೊಳುಸುಖಸಂಕಥಾವಿನೋದದಿಂರಾಜ್ಯಂಗೆಯ್ಯು ತ್ತಮಿ
[9] ರೆ || ತತ್ಪಾದಪದ್ಮೋಪಜೀವಿ || ದೇವೋದೇವಸದ್ರಿಕ್ಷಭೋಗನಿಳಯಃಸಂಪೂರ್ಣ್ಣಲಕ್ಷ್ಮೀಧವೋ ದೇವತ್ಸ .

10 ಷರಾಜರಾಜಿತಮಹೀಕಾಂತಾಪ್ರಿಯೋಸೌಬಭೌ | ದೇವಂಶತ್ರುಧರಾಪತಿಪ್ರಕರಕುಂಭಿಬ್ರಾಜಕಂಣ್ಠೀರ
11 ವೋದೇವಂಶ್ರೀನರಸಿಂಘಭೂಪವಿಜಯಶ್ರೀಶಂಪ್ರಣೂತೋಭವ || ಸ್ವಸ್ತಿಸಮಸ್ತವಿವಿಧಸಾಮಂತಲಕ್ಷ್ಮೀವಿಳಾ
12 ಸಿನೀವಿಳಾಸಂ | ಭಾಳಸ್ತಳಲುಳಿತಕಸ್ತೂರಿಕಾತಿಳಕಾಳಂಕಾರವಿದಗ್ಧಕಾಂತಾಶ್ರಿಂಗಾರಹಾರಂ | ಉದ್ದಂಡಸಾ
13 ವಂತಶುಂಡಾಳ | ರಿಪುಕಲಹಕಳಕಳಾಕಂರ್ಣ್ಣನಾವತೀರ್ಣ್ಣಾಗ್ರ | ವಿದ್ವಿಷ್ಟಬಳಜಳಧಿತೀಬ್ರಬಡವಾನಳಂ | ಅ
14 ಹಿತಸಾಮಂತವಿಪಿನದಾವಾನಳ | ನಾರಸಿಂಹನ್ರಿಪಾಳದಕ್ಷಿಣಾಪ್ರಶಸ್ತಹಸ್ತಕೌಕ್ಷೇಯಕ | ನಿಂರ್ಮ್ಮಳಶ್ರೀ
15 ಯಶಃಕಾಮಿನೀಕಮನೀಯನಾಯಕ | ಸಿತಗರಗಂಡಜಗವನಂಡಲೆವ | ಹುಳಿಯೆಱಿಪುರವರಾಧೀಸ್ವ
16 ರ | ಶ್ರೀಗೋಯಿದೇವನಾನ್ವಯವೆಂತೆಂದಡೆ || ಸ್ತಿರಗಂಭೀರನೊಳಂಬನಗ್ರಮಹಿಷೀಶ್ರೀದೇವಿಯುಂತದ್ವಿ
17 ಷೋತ್ಕರರರಂತಾಗಳೆಬಂದುಬಂದಿವಿಡಿಯಲುತದ್ವೈರಿಸಂಘಾತಮಂಭರದಿಂದೆಯ್ದಿತಳಪ್ರಹಾರದೊ
18 ಳೆಕೊಂಡಂದಿತ್ತನಾಭೂಪನಾದರದಿಂವೀರತಳಪ್ರಹಾರಿವೆಸರಂಧಾತ್ರೀತಳಂಬಂಣ್ಣಿಸಲು || ಚಾಳುಕ್ಯಾಹ
19 ವಮಲ್ಲನ್ರಿಪಾಳನಕಟಕದೊಳೆಕೊಂದುದೊಡ್ಡಂಕಮುಮಂಲೀಲೆಯೊಳೆಪಡೆದನದಟಂಪಾಳಿಸಿದೊಡ್ಡಂಕಬ
20 ಡಿವನೆಂಬೀಬಿರುದಂ || ಅಂತಾತನಮಗನಾಹವಮಲ್ಲಂಗಂಹೊಂನ್ನವ್ವೆಗಂಪುಟ್ಟಿದಸಾಮಂತಭೀಮನೆಂತೆಂದೊಡೆ ||
21 ಅತಿಮದಕಾರಿಸಿಂಧುರಘಟಾಳಿಘಟೋಗ್ರಮ್ರಿಗೇಂದ್ರವಿಷ್ಣುಭೂಪತಿಯುಮನಕ್ಕೆರಾಗವೊದವುತ್ತಿರ
22 ಲಾತನಬೀಡಿನಲ್ಲಿತಾಂಸಿತಗರಗಂಡನಂಪದಿದುಕೊಂದದಟಂಪಡೆದಂಮಹೀಪನಿಂಸಿತಗರಗಂಡನೆಂಬಬಿರುದಂಕ
23 ಲಿಭೀಮನಿಳಾತಳಾಗ್ರದೊಳು || ಮತ್ತಮಾತನತನೂಜರು || ಜನಕಂಸಾಮಂತಭೀಮಂಪ್ರಥಿತಗುಣಗ
24 ಣೋದ್ಭಾಸಿತಾಂಚಟ್ಟಿಯಕ್ಕಂಜನನಿಪ್ರಖ್ಯಾತಮಾಚಂಸಮರಜಯವಧೂಕಾಂತಸಾಮಂತಚಟ್ಟಂ
25 ಗನುಜಂಸಾಮಂತಮಲ್ಲಂನಿರುಪಮಸುಚರಿತ್ರಾಂಸ್ವಿತಂಗೋಯಿದೇವಂವಿನುತಶ್ರೀಜೈನಮಾರ್ಗ್ಗ
26 ಸ್ಥಗಿತಗುಣಕಳಾಳಾಪನುದ್ಯತ್ಪ್ರತಾಪಂ || ಅಂತುಸಾಮಂತಗೋವಿದೇವಮಗರೆನಾಡುಮೂನೂ
27 ಱಿವೊದಲವಾಡಕಳಿಕಟ್ಟೆಯಂಸರ್ವ್ವಬಾಧಾಪರಿಹಾರವಾಗಿಯಾಳುತ್ತವಿರೆ || ಸಕವರ್ಷ ೧೦೬೫
28 ನೆಯರುಧಿರೋಗಾರಿಸಂವತ್ಸರದವೈಶಾಖಶುದ್ಧಸಪ್ತಮಿಬ್ರಿಹವಾರಪುಷ್ಯನಕ್ಷತ್ರದಂದು || ಸ್ವಸ್ತಿ
29 ಯಮನಿಯಮಸ್ವಾಧ್ಯಾಯಧ್ಯಾನಧಾರಣಮೌನಾನುಷ್ಠಾನಜಪಸಮಾಧಿಶೀಲಗುಣಸಂಪಂನರುಮತ್ತಂ
30 ಶಬ್ದಶಾಸ್ತ್ರಕೌಮಾರರೂಪಾವತಾರವ್ಯಾಕರಣೋತ್ತರಶಾಸ್ತ್ರಜ್ಞರುಮತ್ತಂಜ್ಯೋತಿಷಶ್ರೀಕರಣಲಘುಮಾ
31 ನಸಕರಣರತ್ನಾದಿಜ್ಯೋತಿಜ್ಞತ್ರಿಕಾಲಜ್ಞರುಮತ್ತಂಶಿವಾಗಮಾಭ್ಯಾಸಿಗಳುಲೋಕಾಚಾರ್ಯ್ಯರುಲೋಕೋತ್ತ
32 ಮರಪ್ಪಶಿಷ್ಟಬ್ರಾಹ್ಮಣರುಆಳ್ವಿಭಟ್ಟರುಈಕಲಿಗೇಶ್ವರದೇವರಪ್ರತಿಷ್ಠೆಯಂಮಾಡಿಸಿದಲ್ಲಿಸಾವಂತಗೋ
33 ವಿದೇವರುಅಂಗಭೋಗನಿವೇದ್ಯಬ್ರಾಹ್ಮಣರಆಹಾರದಾನಕ್ಕಂಆಳ್ವಿಭಟ್ಟರಂಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿದೇವ
34 ರಿಗೆಬಿಟ್ಟದತ್ತಿಹಿರಿಯಕೆಱೆಯಚಿಕ್ಕತುಂಬಿನವೊದಲೇರಿಯಬಯಲಲುಬಿಟ್ಟಗದ್ದೆಖಂಡುಗಂ೧ಅಡುವಗೆ
35 ಱೆಯಹಿರಿಯತುಂಬಿನವೊದಲೇರಿಯಬಯಲಲುಗದ್ದೆಖಂಡುಗಂ೧ಮತ್ತಮಲ್ಲಿಕಳಿಕಟ್ಟೆಯಹೊಯ್ಸಳ
36 ಗೌಡನಮಮ್ಮಗಸಾತಯನಾಯಕಬಿಟ್ಟಗದ್ದೆಖಂಡುಗ೧ದೇವಾಲ್ಯದಹಡುವಣೆಂಬರಮೂಡಲುನಿಱಿಂಗಲ

37 ಹಡುವಣಬಾಯಿಕಲುಪರಿಯಂತಂಬಿಟ್ಟಬೆದ್ದಲೆಮತ್ತರೊಂದುವಂಆಳ್ವಿಭಟ್ಟರುತಾವುದೇವಾಲ್ಯದಿಂಮೂ
38 ಡಲುಹೊಂನುಕೊಟ್ಟುತುಂಬನಿಕ್ಕಿಸಿಮೇಲುಮಕ್ಕಿಯಗದ್ದೆಯುಂಮಾಡಿಸಿದೇವರಿಗೆಬಿಡಿಸಿದರುಮತ್ತಂ ದೇವರಸಂ
39 ದಾದೀವಿಗೆಗೆಅಡುವಗೆಱೆಯೊಳಗಣಬೆದ್ದಲೆಆಱುನೂಱುಂಯಿಂತೀಧರ್ಮ್ಮಮಂಪ್ರತಿಪಾಳಿಸಿದಾ ತನು
40 ವಾರಣಾಸಿಕುರುಕ್ಷೇತ್ರದಲುಸಾಸಿರಕಪಿಲೆಯುಂವೇದಪಾರಗರಪ್ಪಸಾಸಿರಬ್ರಾಹ್ಮಣರಿಗೆದಾನಂ
41 ಮಾಡಿದಫಲಮಕ್ಕುಂ || ಯಿಂತೀಧರ್ಮ್ಮಮಂಕೆಡಿಸಿದಾತನುವಾರಣಾಸಿಕುರುಕ್ಷೇತ್ರದಲುಸಾಸಿರಕಪಿ
42 ಲೆಯುಮುಂವೇದಪಾರಗರಪ್ಪಸಾಸಿರಬ್ರಾಹ್ಮಣರುಮಂಕೊಂದಮಹಾಪಾತಕನಕ್ಕು || ದೇವರಿಗೆತೆಲ್ಲಿಗಸೆ . . .
43 ಕಳುಬಿಟ್ಟಆಯತೆಲ್ಲಿಗಕೇಸಿಯಂಣನುಂಹೊಟ್ಟೆಯಕಾಳಿಸೆಟ್ಟಿಯುಂಜಗತೆಯನುಂಆವಾರೆಯನುಂಅ ಯಿತಂ
44 ಣನಕೇತಣನುಂಮಾಚಂಣನಹಿರಿಯಕಾಳೆಯನುಂಚಿಕ್ಕಕಾಳೆಚಟ್ಟಿಯನುಂಯಿನ್ತನಿಬರುಂದೇವರನಂ ದಾದೀವಿ
45 ಗೆಯಾಯಣ್ಣೆಗೆಸೊಂಡಿಗೆಯಂಬಿಟ್ಟರುಮತ್ತಂದೇವಾಲ್ಯದಕೆಲಸಕ್ಕಂವರಿಸಕ್ಕೆಗಾಣದಲೊಂದುಹಣವಂ ದೇವರ
46 ಸಂನಿಧಾನದಲುಧಾರೆಯೆಱೆದುಬಿಟ್ಟರುಇನ್ತೀಧರ್ಮ್ಮಮಂಪ್ರತಿಪಾಳಿಸುವರು || ಸ್ವದತ್ತಂಪರದತ್ತಂವಾ ಯೋ
47 ಹರೇತಿವಸುಂಧರಾಂಷಷ್ಟಿರ್ವ್ವರ್ಷಸಹಸ್ರಾಣಿವಿಷ್ಟಾಯಾಂಜಾಯತೇಕ್ರಿಮಿ || ನವಿಷಂವಿಷಮಿತ್ಯಾಹು ರ್ದ್ದೇವಸ್ವಂ
48 ವಿಷಮುಚ್ಯತೇವಿಷಮೇಕಾಕಿನಂಹಂತಿದೇವಸ್ವಂಪುತ್ರಪೌತ್ರಿಕಂ || ಹರ || ಓನ್ನಮಃಶಿವಾಯ ||

56

ಅದೇ ಹೋಬಳಿ ಶಂಕರನಹಳ್ಳಿ ಈಶ್ವರದೇವಸ್ಥಾನದ ಬಳಿ ನಟ್ಟ ಕಲ್ಲು.

1 ನಮಸ್ತುಂಗಸಿರಸ್ತುಂಬಿಚಂದ್ರಚಾಮರಚಾರವೇತ್ರೈಳೋಕ್ಯನಗರಾರಂಭಮೂಳ . . . .
2 ಯಸಂಭವೇ || ಸಕಳಸ್ಯ . . . . ಕ್ಯನು . . . .
3 ಪಾದಸೇವ . ಶುಭಪಂಚ . . . . ಜಾನ್ನವಿ || ನಮಃಶಿವಾಯಶ್ರೀಸಿಂ . .
4 ಸ್ವಸ್ತಿಸಮಧಿಗತಪಂಚಮಹಾಸಬ್ದಮಹಾಮಂಡಳೇಸ್ವರತ್ರಿಭುವನಮಲ್ಲಯೆಱೆಯಂಗ . .
5 . ಳದೇವಂಗಂಏಚಲದೇವಿಯುರ್ಗ್ಗಮುದಿತೋದಿತಮಾಗಲ್ ಪುಟ್ಟಿದಬಲ್ಲಾಳುವೊಯ್ಸಳದೇವನುಂ
6 ಬಿಟ್ಟಿದೇವನುಂಉದೆಯಾದಿತ್ಯದೇವನುಂಆವಿಷ್ಣುವರ್ದ್ಧನದೇವನಪ್ರತಾಪವೆಂತೆಂದಡೆ || ಸ್ವಸ್ತಿಸಮಧಿ
7 ಗತಪಂಚಮಹಾಸಬ್ದಮಹಾಮಂಡಳೇಸ್ವರನುಂದ್ವಾರಾವತೀಪುರವರಾಧೀಸ್ವರಆದವ[ಕು]ಳಾಂಬ[ರ] ದ್ಯೂಮ
8 ಣಿಸಮ್ಯಕ್ತಚೂಡಾಮಣಿಮಲಪರೊಳ್ಗಂಡ್ಯಾದ್ಯನೇಕನಿಜನಾಮಾವಳೀಸಮೇತರಪ್ಪಶ್ರೀಮನ್ಮ
9 ಹಾಮಂಡಳೇಸ್ವರತ್ರಿಭುವನಮಲ್ಲತಳಕಾಡಗೊಂಡಭುಜಬಳವೀರಗಂಗಹೊಯ್ಸಳವೀರಬಲ್ಲಾಳು
10 ದೇವರುಂಗಂಗವಾಡಿತೊಂಭತ್ತಱುಸಾಸಿರಮುಮಂದುಷ್ಟನಿಗ್ರಹಸಿಷ್ಟಪ್ರತಿಪಾಲಕನಾಗಿದೋರ
11 ಸಮುದ್ರದಲ್ಲಿಸುಖಸಂಕಥಾವಿನೋದದಿಂಪ್ರಿಥ್ವೀರಾಜ್ಯಂಗೆಯ್ವುತ್ತಿರೆ || ಸ್ವಸ್ತಿಶ್ರೀಮನ್ಮಹಾಸಾಮಂ
12 ತಚೋಳಯ್ಯಂಗಂಸೋವಯನಾಯಿಕಿತಿಯುರ್ಗ್ಗಂಪುಟ್ಟಿದಸುಪುತ್ರಸಾವಂತಬೆಸದಯ್ಯಂಗಂಸಾತವೆ

13 ನಾಯಕಿತಿಯರ್ಗ್ಗಮುದಿತೋದಿತಮಾಗಲುಪುಟಿದರುಸಾವಂತಮಾಚಯ್ಯನುಂಸಾವಂತಬಿಟ್ಟಿಯಂಣ
14 ಸಾವಂತಚೋಳಯ್ಯನುಂಸಾವಂತಹುಳ್ಳಯ್ಯನುಂ | ಸಾಮಂತಬೋವಯ್ಯಂಗಂಜಕ್ಕವೆನಾಯಕಿತಿ
ಯ
15 ರ್ಗ್ಗಂಪುಟ್ಟಿದಸುಪುತ್ರಮಾಚಯ್ಯನಾಯಕನುಂಸಂಗಯ್ಯನಾಯಕನುಆಮಾಚಯ್ಯನಾಯಕಂಗಂ
16 ಚಿಲುವಾಡಿನಾಯಿಕಿತಿಯರ್ಗ್ಗಂಪುಟ್ಟಿದಸುಪುತ್ರಕೊಲದೀಪಕಸಾವಂತಲಕ್ಕ್ಮಯನಾಯಕನುಂ
17 ಸಾವಂತರಾಯಣನುಯಿಂತಿವರಪ್ರತಾಪವೆಂತೆಂದಡೆ || ಸ್ವಸ್ತಿಸಮಧಿಗತಪಂಚಮಹಾಶಬ್ದ[ಮ]ಹಾ
18 ಸಾಮಂತ್ತವೀರಲಕ್ಮೀಕಾಂತ್ತತುರೆಯರೇವಂತಸಬಳತ್ರಿಣೇತ್ರಪರಬಳಕ್ರಿತಾಂತ್ತಗೊಡ್ಡಗಂಡರವರಿಸುವಸಾ
19 ಮಂತರಗಂಡಗೋತ್ರಪವಿತ್ರಪರಾಂಗನಾಪುತ್ರಬುಧಜನಚಿಂತಾಮಣಿಡಾಯಿಗಮುರಾರಿವಿನೇಯೋಪ
ಕಾರಿ
20 ಪುಸಿರ್ವ್ವಬಾದುಲೋಭದಾರೋಗದುಟ್ಟರಗಂಡಮುದುಗೂರದೇವೀಲಬ್ಧವರಪ್ರಸಾದಮ್ರಿಗಮದಾಮೋ
21 ದನೀತಿಚಾಣಾಕ್ಯಮಱೆಯೊಕ್ಕರಕಾವಸರಣಾಗತವಜ್ರಪಂಜರನುಡಿದುಹುಸಿವರಗಂಡಎಕ್ಕಿಲಕುಮು
22 ದವನವಿಕಾಸಚಂದ್ರಸದಾನಂದಭೋಗನಾಗೇಂದ್ರಗಡಿವಕಮಲಮದಭೃಂಗಸಾಮ್ಯತಪ್ಪೆತಪ್ಪುವಂ
23 ಬೀರದಿಂದೊಪ್ಪುವಂಯೆಂತುಮಾರ್ಪ್ಪವಂವಯಿರಿಮನೋಭಂಗಪೊಯಿಸಳದೇವಪಾಧಾರಾಧಕನಾ
24 ಮಾವಳೀಸಮೇತರಪ್ಪಶ್ರೀಮನ್ಮಹಾಸಾಮಂತಲಕ್ಕ್ಮಯನಾಯಕರಕಿತ್ತನಕೆಱೆಬಡಿಕೆಯಾ
25 ಗಿಸುಖಸಂಕಥಾವಿನೋದದಿಂರಾಜ್ಯಂಗೆಯ್ಯುತ್ತಮಿರೆ || ಸ್ವಸ್ತಿಶ್ರೀಮತುಬೊ
26 ಪ್ಪಗಲುಡಂಗಂಮಾರಗಲುಡಿಗಮುದಿತೋದಿತಮಾಗಲುಪುಟ್ಟಿದಮಸಣಗಲುಡನಪ್ರ
27 ತಾಪವೆಂತೆಂದಡೆ | ವಿವೇಕವಿದ್ಯಾಧರಸಾಹಿತ್ಯಸಂಪನ್ನಂರೂಪಿನಕಾಮದೇವಭೋಗದ
28 ಲಿಂದ್ರಂಗೋತ್ರಪವಿತ್ರಪುರುಷಚಿಂತಾಮಣಿಕಾಯದಲಿಬ್ರೆಹಸ್ಪತಿಮಂತ್ರಿಚೂಡಾಮ
29 ಣಿಪ್ರಭುಗಳಾದಿತ್ಯಶ್ರೀಮತುಸಾಮನ್ತಬೀಳಯ್ಯನಾಯಕನಮಯಿಂದನಕಿತನಕೆಱೆ
30 ಯಮಸಣಗಲುಡನಸತಿಯಗುಣವೆಂತೆಂದಡೆ || ಕ || ಮಲ . . ಯಮ್ರಿದುವಚನೆಸಾದು
31 . ಳ್ಳಿದಳಭಿಮಾನಿಸದ್ಗುಣಿಸದ್ರಕ್ಷಣಸಉಭಾಗ್ಯವಂತಮಸಣಗಲುಡನಮನೋವಲ್ಲಭೆಮಾಣಿ
32 ಗಲುಡಿಬುಧಜನರಕು . . . ವನಿಂ || . . . ಯರಕುಲತಿಲಕಮಹಾಪ್ರಭು
33 ಮಸಣಗಲುಡಕಱೆಯ . . ಸಿತಮಬೊಪ್ಪಗಲುಡನಹೆಸರಲುಸಿವಲಿಂಗಪ್ರತಿ
34 ಷ್ಟೆಯಂಮಾಡಿದುರ್ಮ್ಮುಖಿಸಂವಚರದಪಾಲುಗುಸುದ್ಧಏವಡವಾರದಂದುಬಮ್ಮಚಿಯ .
35 ಹಾಗದಾನಕ್ಕಂಕೆಱೆಯಕೆಳಗೆಮೊದಲೇರಿಯಲಿಗದ್ದೆಸಲಗೆನಾಲ್ಕು ೪ ದೇವಾಲ್ಯದಿಂ
36 ಬಡಗಲುಬೆದ್ದಲೆಮತ್ತರೊಂದುಗದೇವರನಂದಾದೀವಿಗೆಗೆಕಯ್ಗಾಣಗಸಿವಾಲ್ಯಮಂ
37 ಮಾಡಿದಲ್ಲಿಗೆತನಗೆಕೊಡುವಹೊನ್ನಲಿಸವಭಾಗಹೊನ್ನನಿಳಿಹಿಕಲುಕುಟಿಗಜಕ್ಕೋಜಹ .
38 ದಗದೆದೇವರಗದ್ದೆಯಿಂಹಡುವಲುಸಗಮತನಡುಬಯುಲಲಿಸಗಬೆದ್ದಲೆತೊಗಂ
39 ಪಂಡಿತಮಾಚೆಯಗೆದಾನಕ್ಕಂಗದ್ದೆಕೊಗಮಸಣಗಲುಡಂಗೆಕೊಡಗಿಯಗದ್ದೆಸ . ೨
40 ಯಿಂತೀಧರ್ಮ್ಮಮಂಪತಿಪಾಳಿಸಿದಾತಗಂಗೆವಾಣರಾಸಿಯಲ್ಲಿಸಾಸಿರಕವಿಲೆಯುಂ
41 ಕೊಳಗುವಂಹೊನ್ನಲುಕಟ್ಟಿಸಿಸಾಸಿರ್ಬ್ಬರುವೇದಪಾರಗರಪ್ಪಬ್ರಾಹ್ಮಣರ್ಗ್ಗದಾನಂಗೆಯ್ದಪು
42 . . ಕ್ಕುಯಿಂತೀಧರ್ಮ್ಮಮನಳಿದಾತಂಸಾಸಿರಕವಿಲೆಯುಂಬ್ರಾಹ್ಮಣರುಮಂಕೊಂ
43 . . ನರಕಕೆ . ಗುಯಿಂತೀಸಾಸನವಂಬರದಸೇನಬೋವಹೆಮ್ಮಾಡಿ || ಬಮ್ಮಗಲುಡಂಗೆ
44 . . ಸಿದ್ದಪದುಮನಮಗ . . . . . . ಗದೆಸ . . . .

57

ಅದೇ ಹೋಬಳಿ ಜನ್ನಾವಾರ ಗ್ರಾಮದ ಮುಂದೆ ಬಿದ್ದಿರುವ ಕಲ್ಲು.

ಪ್ರಮಾಣ 4′ 9″ × 2′ 6″.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ | ತ್ರೈಳೋ
2 ಕ್ಯಂನಗರಾರಂಭಮೂಲಸ್ತಂಭಾಯಶಂಭುವೇ ||
3 . . . . ಗುಣ . . . . ಸೇನಬೋವಜಕ್ಕಯ್ಯಂ . . . . .
4 ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂದ್ವಾರಾವತೀಪುರ
5 ವರಾಧೀಶ್ವರಂಯಾದವಕುಳಾಂಬರದ್ಯುಮಣಿಸಮ್ಯಕ್ತ್ವರತ್ನಾಕರಂ || ಶ್ರೀಮತುತ್ರಿಭುವ
6 ನಮಲ್ಲತಳಕಾಡುಕೊಂಗುನಂಗಲಿ . . . . ಹುಲಿಗೆಱೆಬನವಾಸೆಹಾನುಂಗಲುಗೊಂ
7 ಡಭುಜಬಳವೀರಗಂಗನಸಹಾಯ . . . . ಮುಂನೊಣಂಬವಾಡಿಮೂವ
8 ತ್ತಿರ್ಚ್ಛಾಸಿರಮಂ . . . . ಹುಲಿಗೆಱೆಮೂನೂಱು
9 ಮಂ . . . . ದುಷ್ಟನಿಗ್ರಹಶಿಷ್ಟಪ್ರತಿಪಾಳನದಿಂಶ್ರೀಮದ್ರಾ
10 ಜಧಾನಿದೋರಸಮುದ್ರದನೆಲೆವೀಡಿನೊಳಂಸುಖಸಂಕಥಾವಿನೋದದಿಂಪ್ರಿಥ್ವೀರಾಜ್ಯಂಗೆಯ್ಯುತ್ತಮಿರೆ ||
11 ತತ್ಪಾದಪದ್ಮೋಪಜೀವಿ || ಆಮೂವರೊಳಂತಾಂ . . . . ವರಪಡಿಗಿಲ್ಲೆನೆಸೌರ್ಯ್ಯೋದಯದಿಂ
12 ಪಸರಿಸಿದಂಮೇದಿನಿಯುಂವೀರವಿಷ್ಣುವರ್ದ್ಧನದೇವಂ || ಹಲಸಿಗೆಬೆಳ್ವಲವೊಪ್ಪುವಹುಲಿಗೆಱೆಯಾ
13 ಲೊಕ್ಕುಗುಂಡಿ . . ವರೆಗಂಕಲಿಗಳಮುಗುಳ್ದುಂವಿಕ್ರಮಬಲದಿಂಕೈಕೊಂಡವಿಷ್ಣುಭೂಮಂಡಳಮಂ || ಅಂತಾ
14 ತನಗ್ರತನೂಜಂವೀರನರಸಿಂಘದೇವಂಗಂಗವಾಡಿತೊಂಭತ್ತಱುಸಾಈರ(ಂ)ಮಂದುಷ್ಟನಿಗ್ರಹಶಿಷ್ಟ
15 ಪ್ರತಿಪಾಳನಂಗೆಯ್ದುದೋರಸಮುದ್ರದನೆಲೆವೀಡಿನೊಳುಸುಖಂರಾಜ್ಯಂಗೆಯ್ವುತ್ತಮಿರೆಅಂ
16 ತಾತನಗ್ರತನೂಜಂಶ್ರೀವೀರಬಲ್ಲಾಳದೇವರುಗಂಗವಾಡಿನೊಣಂಬವಾಡಿಬನವಾಸೆಹಲಸಿಗೆಹುಲಿ
17 ಗೆಱೆಬೆಳ್ವಲವೊಳಗಾಗಿಹೆದ್ದೊರ್ಱೆಪರ್ಯ್ಯಂತಂದುಷ್ಟನಿಗ್ರಹಸಿಷ್ಟಪ್ರತಿಪಾಳನದಿಂದೋರಸಮುದ್ರದ ನೆಲೆವೀಡಿನ
18 ಲುಪ್ರಿಥ್ವೀರಾಜ್ಯಂಗೆಯ್ಯುತ್ತಮಿರೆ || ತತ್ಪಾದಪದ್ಮೋಪಜೀವಿ || ಶ್ರೀಮತುಚಮ್ಮಾವುಗೆಯಮಹದೇವಣ್ಣಂ
19 ಜನ್ನವಾರಮನಾಳುತ್ತವಿರಲುಮಾರಿಸೆಟ್ಟಿಯತಾವೂರಗವುಡಿಕೆಯಾಗಿರ್ದ್ದಲ್ಲಿತಂನಮಗತೈಲಿಸೆಟ್ಟಿ
20 ಯರಹೆಸರತೈಲೇಶ್ವರದೇವರಸಕವರುಶಂ ೧೧೧೧ ಸೌಮ್ಯಸಂವತ್ಸರದಜೇಷ್ಟಮಾಸಸುದ್ಧಬಿದಿ
21 ಗೆವ್ಯತೀಪಾತಸೋಮವಾರದಂದುಯಾದೇವರನಿವೇದ್ಯಕಂಜೀರ್ಣ್ಣೋದ್ಧಾರಕಂನಂದಾದೀವಿಗೆಗಂತ್ರ ಪೋದನರ
22 ಗ್ರಾಸನಕವಾಗಿಊರನೀರುಂಬಬಾವಿಯಸುತ್ತಣಗದ್ದೆಸ ೨ ಕೊ ೧೫ ಹಳುಗಿನಮೂಡಣದಿಬ್ಬದಮೊದ
23 ಲೇರಿಯಗಱ್ದೆಸಲಗೆ ೧ ಬೆದ್ದಲುಸಾಹಣಿಯಕೆಱೆಯಹಡುವಗೋಡಿಯಯೊಳಮೆಯ್ಯಲುಬೆದ್ದ
24 ಲೆಮತ್ತರುಗದೇವಂಣ . . . . ಯಿನ್ತಿನಿತುಮಧರ್ಮ್ಮರಾಸಿಗುರುಗಳಕಾಲಂಕಚ್ಛಿರ್ಧಾರಾ
25 ಪೂರ್ವ್ವಕಂಮಾಡಿಬಿಟ್ಟಧರ್ಮ್ಮಂಇನ್ತೀಧರ್ಮ್ಮಮಂಕಿಡಲೀಯದೆಪ್ರತಿಪಾಳಿಸಿನಡಿಸಿದಾತಂಗೆಗಂಗೆವಾ ರಣಾ
26 ಸಿಯಲುಸಹಶ್ರಕವಿಲೆಯಂಸಹಶ್ರಬ್ರಾಹ್ಮಣರ್ಗ್ಗೆಕೊಟ್ಟಫಲವಕ್ಕುಇನ್ತೀಧರ್ಮ್ಮಮನಾವನೋರ್ವ್ವಂಕಿಡಿಸಿ
27 ದಾತಂಗೆಗಂಗೆವಾರಣಾಸಿಯಲುಸಹಶ್ರಕವಿಲೆಯಂಸಹಶ್ರಬ್ರಾಹ್ಮಳರುಮಂಕೊಂದಬ್ರಹ್ಮತಿ
28 ಯಲುಯವೀಚೀಕುಂಭೀಪಾಕವೆಂಬ . . . . ಕಿಳಿದಬ್ರಹ್ಮತಿಯಲುಹೋಹರು ||
29 ಮಗರೆಮುಂನೂಱಿದೊಳಗಣಬನ್ನೆಊರ || ಶ್ವದ(ದ)ತಂಪರದತಂವಯೋಭವೇತವಸುಂಧರ

30 ಸಷ್ಟಿವರಿಶಂಸಹಶ್ರಾಣಿವಿಷ್ಠಾಯಾಂಜಾಯತೇಕ್ರಿಮಿಃ || . . . ಯಸಂಖರದೇವರಗದೆ . . .
31 ಲನಾಡುವೊದಲೇರಿಯಲುಕೊ೧ಂ . . . .

ಅದೇ ಕಲ್ಲಿನ ಬಲಭಾಗದಲ್ಲಿ.

32 . . ಸಲ .
33 ಯಕಲಜಿ
34 ಜ್ಜನವೂರ
35 ವೀರದೇವರ
36 . ನವನೂರ
37 . ರಿಯುವು
38 ಗೌಂಡ . .
39 ಯಿಚವು .
40 ಮಱಿಕು . .
41 ಡನುಆಯ
42 ನಮಗನ
43 ಗಜಯಬ
44 ಗಿಸ್ತದಡೆ
45 ಬಸವಜಯ
46 ಕಲಜಯ
47 ತ್ರ . ಆ . .
48 ವಲ . ನೊ .
49 . . ಬ೯ರ
50 . || ತಂಮಳಆ
51 . . . ಬಕೆಯ
52 . ಧಾರೆಯನೆ
53 ಱಿಾದುಕೊಟ್ಟ
(ಮುಂದೆಕಾಣುವದಿಲ್ಲ.)

58

ಅದೇ ಹೋಬಳಿ ಸಾತಂಗೆರೆ ಸೋಮೇಶ್ವರ ದೇವಸ್ಥಾನದ ಬಳಿ ನಟ್ಟ ಕಲ್ಲು.

1 ಸ್ವದತ್ತಾಂಪರದತ್ತಾಂವಾಯೋಹರೇತಿವಸುಂಧರಾಂ | ಷಷ್ಟಿವರ್ಷಸಹಸ್ರಾಣಿವಿಷ್ಠಾಯಾಂಜಾಯ
2 ತೇಕ್ರಿಮಿಃ || ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂಭಾಯ ಶಂಭವೇ ||
3 ಸ್ವಸ್ತಿಶ್ರೀಮತ್ತ್ರಿಭುವನಮಲ್ಲತಳಕಾಡುಕೊಂಗುನಂಗಲಿನೊಳಂಬವಾಡಿಬನವಾಸೆಹಾನುಂಗಲುಗೊಣ್ಡ ಭುಜಬಳವೀ
4 ರಗಂಗಹೊಯ್ಸಳದೇವರುದೋರಸಮುದ್ರದನೆಲೆವೀಡಿನೊಳುಸುಖಸಂಕಥಾವಿನೋದದಿಂರಾಜ್ಯಂಗೆ
5 ಯುತ್ತಮಿರ್ದ್ದುಸ್ವಸ್ತಿ . . . . ಫಳಭೋಗಭಾಗಿನೀದ್ವಿತೀಯಲ
6 ಕ್ಷ್ಮೀಸಮಾನೆಮಾನಿ . . . . ದೇವಿವಿಮಲದೇವಿಯರಪಟ್ಟಸಾಹಣ
7 ದಅನನ್ತಪಾಳಸಾಹಣಿಯರು . . . . ಕ್ಕೆಸರ್ವ್ವಬಾಧಾಪರಿಹಾರವಾ
8 ಗಿಯಾಳುತ್ತಮಿಱ್ದುಅವರಸಮುಕ್ಷ : . . . ಕರಪ್ಪವಾರಪಾಳಂಗಂಸಾವಣಬ್ಬೆಗಂಉದಿಯ್ಸಿ
9 ದಸುಪುತ್ರರಪ್ಪಜಗಪಾಳನ . . . ಸಾಹಣಿಯುಂತಿಹುಣಪಾಳಸಾಹಣಿ
10 ಯುಂಇನ್ತೀಮೂವಱುಂಪ್ರಬಳರಾಗಿ . ಪ್ರಸ . . ಸ್ವಸ್ತಿಸಮಸ್ತವಸ್ತುಗುಣಸಮ್ಪನ್ನನುಡಿದುಮತ್ತೆನ್ನಂ
11 ಗೋತ್ರಪವಿತ್ರಂಪರನಾರೀಪುತ್ರಂಸಾವಿತ್ರಕುಳತಿಳಕಂಶ್ರೀಭಾಗವತೀದೇವೀಲಬ್ಧವರಪ್ರಸಾದಂಶ್ರೀಗಣ ಪಾಳ
12 ತುರೆಯರೇವನ್ತಂವೀರಶ್ರೀಕಾನ್ತಂಹಯವಚ್ಚರಾಜಂಗಣಿಕಾಮನೋಜವೈರಿಜನಭೀಮಂಮಱಿವುಗೆಕಾ ವಂಸರ
13 ಣಾಗತವಜ್ರಪಂಜರಂವೈರಿದಿಕ್ಕುಂಜರಂತಪ್ಪೆತಪ್ಪುವಂಸ್ಥಾನಕೊಪ್ಪುವಂಚಾಪವಿದ್ಯಾಪ್ರಚಣ್ಡಪ್ರಜೆಮೆಚ್ಚೆ
14 ಗಣ್ಡಸಾಹಸೋತ್ತುಂಗನಯ್ಯನಸಿಂಗಸಾಮಾದಿಸಮಸ್ತಪ್ರಸಸ್ತಿಸಹಿತಶ್ರೀಮತುಅನನ್ತಪಾಳಸಾ[ಹ]ಣಿ ಯರು
15 ಊರೊಳ್ಳಿದರೆನೆನೆಗಳ್ವಂನರಿದನತಿಬುದ್ಧಿಮನ್ತಕಾರ್ಯ್ಯಬ್ರಹಸ್ಪತಿ . . . ರಕ್ಷಸಿನಡವೀವೀರಪ್ರಜೆಮೆಚ್ಚೆ ಗಣ್ಡಅನನ್ತಪಾಳ

16 ಎತ್ತಿಸಿದೇವಾಲಯಮಂಮತ್ತಂಬೇಱಿದಂಗಮಱಿದುಮನ್ನಿಸಿಪುರ್ವ್ವಮಂತರಿಸಿಸಾಮಣಯ್ಯಯಪು
ತ್ರಂಪ್ರಭುಅ
17 ನನ್ತಪಾಳಸಾಹಣಿಯೆನಿಪಪುರುಶಾರ್ತ್ತದಕಣಿಸತ್ಯದನಿಳಯಂಸೌಜನ್ಯಜಳಧಿಧರ್ಮ್ಮಕ್ಕೈತವರ್ಪ್ಪರಹಿತ
18 ವಿದ್ಯಾಧರನೀಧರೆಯೊಳುರಂಜಿಸಿದನಲ್ತೆಅನನ್ತಪಾಳನಿ . . ಂ || ಆತನಕುಲಸ್ತ್ರೀಪ್ರದಿಬದಗುಣಕಮ
ಹಿಜೆಗಂಮಿ
19 ಗಿಲೆನಿಕುಂಕುಲದಚಲದನನ್ನಿಯಪೆಂಪಿಂಜಗದೊಳಗೀಮಲಯಕ್ಕನಪೊಗಳದರಾರುಸುಪುತ್ರನಪ್ಪಹರಿ
ಪಾ
20 ಳನುಮಂ || ದಾರಾವಾಹನಪುತ್ರಂವರನೀವಂಗಣ್ಡಗುಣದೊಳಂಗುಣದೊಳಮಾರ್ದೊರೆಬೀರಶ್ರೀತಿಹು
ಣಪಾಳನಕೂರ . . . .
21 ಕೂರ್ತ್ತುಸಲೆ . . . ನುವರಂ || ಧಾತುಸಂವತ್ಸರದಉತ್ತರಾಯಣಸಂಕ್ರಾನ್ತಿವ್ಯತೀಪಾತಂತದ . .
ಸಾಹಣಿ . .
22 ತಿಟ್ಟ . . ಅಂಗಭೋಗನಿವೇದ್ಯತಮ್ಮಡಿಗಳಾಹಾರದಾನಕ್ಕಂರುದ್ರಸಕ್ತಿಪಣ್ಡಿತರಪುತ್ರನಪ್ಪಉತ್ತಮಸ
ಕ್ತಿಪಣ್ಡಿತ
23 ರಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಅನನ್ತಪಾಳಸಾಹಣಿಯರುಸಾವಣೇಶ್ವರದೇವಂಗೆಬಿಟ್ಟಗದ್ದೆದೇ
ವರಿಟ್ಟಿಸ್ತಾನದಿಂಪೂರ್ವ್ವ . .
24 . ದಪಿರಿಯಬಯಲೊಳಗೆತೋಟದಿಂಪಡುವಲುಸಲಗೆಎರಡುಮುದ್ದಯ . ಆತುಂಬಿನಮೊದಲಲಿ .
25 ದುಬೆದ್ದಲುಊರಿಂಗೆನೈರಿತ್ಯದಿಶಾಭಾಗದಲುಮತ್ತರೊಂದುಇನ್ತೀಧರ್ಮ್ಮಮಂಪ್ರತಿಪಾಳಿಸ
26 ದಳಿಯವಂಗುರುವಂಬ್ರಾಹ್ಮಣನಂಕೊಂದಮಹಾಪಾತಕನಕ್ಕು | ಪೂಜಾರಿಗೆ
27 ಗಕುಸ೧

59

ಅದೇ ಹೋಬಳಿ ಹೊನ್ನಕಟ್ಟೆ ಗ್ರಾಮದಲ್ಲಿ.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂಭಮೂಲಸ್ತಂ
2 ಭಾಯಶಂಭವೇ || . . . ಕಸ್ಯ . . ಕಥಾರಸಂಚಂದ್ರಸೇಖರ . . . .
3 ಗುಣಾನುಕೀರ್ತ್ತನಂನೀಲಕಣ್ಠತವಪಾದಸೇವನಂಸಂಭವನ್ತಿಮಮಜನುಮಜನ್ಮನಿ ||
4 ಕೊಂಡಂತಳಕಾಡಂಕೈಕೊಂಡಂಮೇಲೆತ್ತಿಕೊಂಗನವಯವದಿಂದಂಕೊಂಡಂವಿಷ್ಣುವೆಚೋ
5 ಳನಮಂಡಳಿಕರಮಂಡೆಗೊಂಡು . . . . ಆವಿಷ್ಣುವರ್ದ್ಧನಂಗಂಭಾ
6 ವೋದ್ಭವೆಯೆನಿಸಿನೆಗಳ್ದಪೆಂಪಿಂಲಕ್ಷ್ಮಾದೇವಿಗೆಸುತನುದಯಿಸಿದಂಭೂವಿದಿ
7 ತಯಶೋವಿಭಾಸಿನರಸಿಂಹನ್ರಿಪಂ || ಪಟ್ಟದಸತಿಯೇಚಲೆತಾಂನೆಟ್ಟನೆನರಸಿಂಹನೃಪ
8 ತ್ತಿಗತಿಮುದದಿಂದಂಪುಟ್ಟಿದನಧಿಕವಿಳಾಸಂಬಟ್ಟಜಗತಿವೀರವಿಕ್ರಮಂಬಲ್ಲಾಳಂ ||
9 ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪ್ರಿಥ್ವೀವಲ್ಲಭಂಮಹಾರಾಜಾಧಿರಾಜಂಪರಮೇಶ್ವರಪರ
10 ಮಭಟ್ಟಾರಕಂಯಾದವಕುಳಾಂಬರದ್ಯುಮಣಿಸಮ್ಯಕ್ತಚೂಡಾಮಣಿಮಲೆರಾಜರಾಜ
11 ಮಲಪರೊಳುಗಂಡನಸಹಾಯಶೂರಸನಿವಾರಸಿದ್ಧಿಗಿರಿದುರ್ಗ್ಗಮಲ್ಲಚಲದಂಕರಾಮ
12 ನಿಸ್ಸಂಕಪ್ರತಾಪಭುಜಬಳಚಕ್ರವರ್ತ್ತಿಹೊಯ್ಸಣವೀರಬಲ್ಲಾಳದೇವನು . . . ಮಹೀಮಂ
13 ಡಳಮಂದುಷ್ಟನಿಗ್ರಹಸಿಷ್ಟಪ್ರತಿಪಾಳನಂಗೆಯ್ದುದೋರಸಮುದ್ರದನೆಲೆವೀಡಿನೊಳು
14 ಸುಖಸಂಕಥಾವಿನೋದದಿಂ . . ರಾಜ್ಯಂಗೆಯ್ಯುತ್ತಮಿರೆತತ್ಪಾದಪದ್ಮೋಪಜೀವಿ || ಸ್ವಸ್ತಿ
15 ಶ್ರೀಮನ್ಮಹಾಪಸಾಯ್ತಂಅತಿವಿಶಮಹಯಾರೂಢಪ್ರೌಢರೇಖಾರೇವಂತಪರಬಳ

16 ಕ್ರಿತಾಂತಂ . . ಕಂಡುಸುತ್ತುಬಳಸುವರಗಣ್ಡ | ಆಳಂಕಂಡುಕೆಳಹಿಡಿವರಗಣ್ಡಶೇ
17 ರಿಗೆಡೆದಲ್ಲಳಂನೀತಿಚಾಣುಕ್ಯಂ | ಅಚಳಿತವಾಕ್ಯಂ | ಶ್ರೀಸೋಮನಾಥದೇವರಪಾದಾರಾ
18 ಧಕಂಪರಬಳಸಾಧಕನುಮಪ್ಪಹಿರಿಯಭೇರುಣ್ಡನ . ತದಕೂಸಘಂಟಿ
19 ಯಸಿಂಗಯ್ಯನಾಗಯ್ಯಂಗಳುಸಾತಿಯಬ್ಬೆಗೆಱೆಯಂಸರ್ಬ್ಬಬಾಧೆಪರಿಹಾರ
20 ವಾಗಿಮೆಯ್ದಿವಿತಕ್ಕೊಳ . . ರ್ದ್ದ || ಘಂಟೆಯಸಿಂಗಯ್ಯನಹಳ್ಳಿಯಲು
21 ಸಾಸಮುನಿದೇವರುಸಿಂಗಯ್ಯನಹೆಸರಲುಸಿಂಗೇಶ್ವರದೇವರ
22 ಪ್ರತಿಷ್ಟೆಯಂಮಾಡಿಸಿದಆದೇವರನಿತ್ಯನಿವೇದ್ಯಖಂಡಸ್ಫುಟ
23 ತಜೀರ್ಣ್ಣೋದ್ಧಾರಮಠಪತಿತಪೋಧನರಆಹಾರದಾನಕ್ಕಆ
24 ಚಂದ್ರಾರ್ಕ್ಕತಾರಂಬರಂಸಲುವಂತಾಗಿರೆಸಾತಿಯಬ್ಬೆಗೆಱೆ
25 ಯಮಾಳಗೌಡಿಆಚಟ್ಟಗೌಡಮಾರಗೌಡನಂನಗೌಡರಾಮ
26 ಗೌಡಮಸಣಗೌಡನಮಗಮಾಳಗೌಡನೊಳಗಾದಸಮ
27 ಸ್ತಪ್ರಜೆಗಾವುಂಡುಗಳುಂಸಿಂಗಯ್ಯನುಮಿರ್ದ್ದುಸಕವರಿಷ ೧೧೩೧ ನೆಯ
28 ಸುಕ್ಲಸಂವತ್ಸರದವೈಸಾಖಸು ೭ ವಡವಾರದಂದುಬಾರಂಗಿಸಿದ್ಧರ
29 ಪುತ್ರಸಾಸಮುನಿದೇವರಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿ
30 ಟ್ಟದತ್ತಿಸಿಂಗಯ್ಯನಕೆಱೆಯಹಿಂದಗದ್ದೆಸ ೪ ಬೆದ್ದಲೆದೇವಾಲ್ಯದಿಂಮೂಡ
31 ಲುಸ ೧ ಕೊ ೧೦ ಇಂತೀಧರ್ಮ್ಮವಂತಂನಪುತ್ರಸಂತೆಯ್ಯಂಗೆಸಾ
32 ಸಮುನಿದೇವರುಕೊಟ್ಟರು || ಚಟ್ಟಯ್ಯನಕೆಱೆಯಹಿಂದೆಗಕೊ ೧
33 ಇನ್ತೀಧರ್ಮ್ಮಮಂಪ್ರತಿಪಾಳ್ಸಿದರುಗಂಗೆವಾರಣಾಸಿಯಲುಸಾವಿರಕವಿಲೆಯ
34 ಬ್ರಾಹ್ಮಣರ್ಗ್ಗಂತಪೋಧನರ್ಗ್ಗಂದಾನಗೊಟ್ಟಫಲಇಧರ್ಮ್ಮವಂಕೆಡ್ಸಿದಂಗೆಆತೀರ್ತ್ಥದಲಾ
35 ಕವಿಲೆಯುಂಬ್ರಾಹ್ಮಣತಪೋಧನರುವಂಕೊಂದಪಾತಕವಕ್ಕು || ಸ್ವದತ್ತಂಪ
36 ರದತ್ತಂವಾಯೋಹರೇತಿವಸುಂಧರಾಸಷ್ಟಿವರ್ಷಸಹಸ್ರಾಣಿವಿ
37 ಷ್ಠಾಯಾಂಜಾಯತೇಕ್ರಿಮಿ ||

60

ಅದೇ ಹೋಬಳಿ ಸೊಪ್ಪಿನಹಳ್ಳಿಯ ಊರುಬಾಗಲ ಬಳಿ ಬಿದ್ದಿರುವ ಕಲ್ಲು.

ಪ್ರಮಾಣ 4′ × 2′ 6″.

1 ಶುಭಮಸ್ತುನಮಃಕೇಶವನಾಥಾಯಾನಯನಾ
2 ನಂದಮೂರ್ತ್ತಯೇ | ವೇಲಾಪುರೀನಿವಾಸಾಯಸತ್ಯ
3 ಗ್ಯಾನಾಯವಿಷ್ಣವೇ | ಸ್ವಸ್ತಿಶ್ರೀಯದ್ಬು[ದ]ಯಶಾಲಿವಾ
4 ಹನಸಕವರುಷಂಗಳು ೧೫೦೨ ಮನ್ಮಥಸಂವತ್ಸ
5 ರದಚಯಿತ್ರಶು ೧ ಗುರುವಾರದಲುಶ್ರೀಮತು
6 ದುರ್ಗ್ಗದರಂಗಪ್ಪನಾಯಕರುಬಾಣವಾರಕ್ಕೆಸಲು
7 ವಗ್ರಾಮಸೊಪಿನಹಳಿಯನುತಿರುವೆಂಗಳಯಾಗೆಕೊ
8 ಟನುಸೊಪಿಹಳಿಗ್ರಾಮವನುಬೇಲೂರಚೆಂನಿಗರಾಯ
9 ನಿಗೆಸಮರ್ಪಿಸಿದನು || ಯಿಗ್ರಾಮಕ್ಕೆಅಳುಪಿದವನು
10 ತಂಮ್ಮತಾಯಿತಂದೆಯನುವಾರಣಾಸಿಯಲಿಕೊರಳಕೊ
11 ಯಿದ[ಪಾ]ತಕಕೆಹೋಗುವನು

61

ಅದೇ ಹೋಬಳಿ ಹೊಳಲಕೆರೆ ಗ್ರಾಮದಲ್ಲಿ ರಾಮೇಸ್ವರ ದೇವಸ್ಥಾನಕ್ಕೆ ದಕ್ಷಿಣ ದಿಕ್ಕಿನಲ್ಲಿ ನೆಟ್ಟ ಕಲ್ಲು.

ಪ್ರಮಾಣ 6′×3′ 10″.

1 ಶ್ರೀಮಹಾದೇವಾಯನಮಃ || ನಮಸ್ತುಂಗಸಿರಶ್ಚುಂಬಿಚಂದ್ರಚಾಮರಚಾರವೇ | ತ್ರೈಳೋಕ್ಯನಗರಾರಂ
2 ಭಮೂಲಸ್ತಂಭಾಯಸಂಭವೇ || ಸ್ವಸ್ತಿಹೊಯ್ಸಳವಂಸಾಯಯದುಮೂಳಾಯ
3 ಯದುಭವಕ್ಷತ್ರಮೌಕ್ತಿಕಸಂತಾನಂಪ್ರಿತ್ವೀನಾಯಕಮಂಡನಂ || ಯಾದವವಂಸಕ್ಕಮರೆಮಹೋದಯ ವೆಱೆಯಂಗ
4 ನ್ರಿಪತಿವಿನೆಯಾದಿತ್ತ್ಯಂಗಾದಂತನೆಯಂವಿನಯಂಸೋದರಮೆನೆತನಗೆನೆಗಳ್ದಧೀರೋದಾತ್ತಂ || ಬಿಂಬಂ ಭಾನುಗೆಭುವನಾ
5 ಳಂಬಗುಣಂಮೇರುಗಿಂದ್ರವಜ್ರಕ್ಕೆಜಯಾಡಂಬರಮೆಂಬಂತಿರಲೊಪ್ಪಂಬಡೆದಂತಂದೆಗೆಂದುವೆಱೆಯಂಗ ನ್ರಿಪ
6 ಂ || ಜಟ್ಟಿಗರದಟಂ . ದಟ . . . ಗತಿಗಱಿ . . . ದಿಂದು . . . ಮೇಚಲದೇವಿಗೆನೆಟ್ಟನೆಬ ಲ್ಲಾಳವಿಷ್ಣುವುದಯಾ
7 ದಿತ್ಯರು || ಮೊದಲೊಳುಹೊಯ್ಸಳ . . . . ತೋಳ್ವಲ್ಪಿನಿಂತಾಳ್ದಿತಂನುದಯಂರಂಜಿಸೆ ತಂಸಬಲು
8 ಪೊದವೆತಂನಾಪ್ರ್ಪೇಱೆ . . . . ಕೊಂಡುತಳಕಾಡಂಗಂಗರಾಜ್ಯಕ್ಕೆತಾಂಮೊದಲಾದಂ
9 ಯದುವಂಶವರ್ದ್ಧನ . . . . ಪುಟ್ಟಮನಾವಗಂಮಹಾಬಳಪದಪೂ
10 . . ದಿಂದೆ . . . . ಗಳಂಸಸಿವಂತೆವಿಷ್ಣುದೋರ್ವ್ವಳದೊಳೆ ಕಿತ್ತು
11 ಮೊತ್ತರಿಸಿಕೌಂಗಿನ . . . ಕಾದೆ . . ದಿದಲಕ್ಷ್ಮಂಗೆಸದೆರ್ದ್ದುವಿಷ್ಣುಗೆಂತಂತೆವಲಂಲಕ್ಷ್ಮಾದೇ . . ಸಮು
12 ಮ್ರಿಗಲಕ್ಷ್ಮನನೆ . . . ಸತಿಯೆನೆಗಳ್ದಳು || ಅವರ್ಗೆಮನೋಜನಂತೆಸುದತೀಜನಚಿತ್ತಮನಿರ್ಕ್ಕೊ ಳಲುಕೆಸಾಲುವವಯ
13 ವಸೋಭೆಯಿಂದತನುವಿಂ . . . ಬಭಿಧಾನಮನಾನದಂಗನಾನಿವಹಮ . . . . . . ಮಾಯ್ವ ವನೋ . . . ನೆಚ್ಚುಯುದ್ಧದೊಳುತವಿಸು
14 ವನಾದನಾತ್ಮಭವನಪ್ರತಿಮಂನರಸಿಂಹಭೂಭುಜಂ . . . . ||

. . . .

19 . . . . ಪಾಳರಿಂತಿವರು | ಸ್ವಸ್ತಿಸಮಧಿಗತಪಂಚಮ
20 ಹಾಶಬ್ದ . . . . ದ್ವಾರಾವತೀಪುರವರಾಧೀಸ್ವರತುಳುವಬಳಜಳಧಿಕಾಳಾನಳದಾಯಾದ ದಾವಾನಳ . .
21 . . . . ಮಂಡಳಿಕಬೇಂಟೆಕಾಱಪರಮಂಡಳಸೂಱೆಕಾಱಸಂಗ್ರಾಮಭೀಮಕಲಿಕಾ
22 ಲಕಾಮಸಕಳ . . . . . . ವಿತರಣವಿನೋದವಾಸಂತಿಕಾದೇವೀಲಬುಧವರಪ್ರಸಾದಮ್ರಿಗಮ ದಾಮೋದನಾ
23 ಮಾದಿಸಮಸ್ತಪ್ರಸಸ್ತಿಸಹಿತಂ . . . . . ತಳಕಾಡುಕೊಂಗುನಂಗಲಿಗಂಗವಾಡಿನೊಳಂಬವಾಡಿಉ ಚ್ಚಂಗಿಬನ
24 ವಸೆಹಾನುಂಗಲು . . . . . ನಸಹಾಯಸೂರನಿಸ್ಸಂಕಪ್ರತಾಪಹೊಯ್ಸಳವೀರಬಲ್ಲಾಳದೇವರು

25 ಸಕಳ . . . . ಸಿಷ್ಟಪ್ರತಿಪಾಳನಂಗೆಯ್ದುರಕ್ಷಿಸುತ್ತುಂದೋರಸಮುದ್ರದನೆಲೆವೀಡಿನೊಳುಸುಖಸಂ
26 ಕಥಾವಿನೋದದಿಂ . . . . . ತದೀಯಪಾದಪದ್ಮೋಪಜೀವಿ || ಅಂತುನೆಗಳ್ದಹೊಯ್ಸಳವೀರಬಲ್ಲಾಳನಚಿತ್ತ . .
27 ಸಂತಾನ . . . . ಕಾರ್ಯ್ಯಸ್ತಿತಿಯೆಂದು . . . .
28 . . . . ದಂತೆಸಭ್ಯರ . . . . ಕಾರ್ಯ್ಯದಮೆಯ್ಯೊಳಂನಿಯೋಗದೊಳುತಡಮಿ
29 . . . . ಮುದದಿಂದಂ . . . . ಬಣ್ಣಿಪರೀಧಾತ್ರಿಯೊಳು || ಸ್ವಸ್ತಿಸಮಸ್ತವೀರಬ
30 . . . . . . ಸಾವಂತ . . . . ಸಾಮಂತನಿಟ್ಟೆಲವಂಮುಱಿದಟ್ಟಿಯ . . . .
31 . . . . ದೇವರಪಾದಾರಾಧಕಂಪರಬಳಸಾಧಕನುಮಪ್ಪಸಾವಂತಜಯಗೊಂಡನಾಯಕಂ
32 . . . . ವೈರಿಮಸ್ತಕಸೂಲಂಸದಮಳಕೀರ್ತ್ತಿವಿಳಾಸಂಮುದದಿಂ
33 . . . . ಸತಿಮಾರವೆತನಗೆಂದುಂಸುತನೊಳ್ಪಿನಮಾಚಿದೇವಮನುಚಾರಿತ್ರಸಂಕ್ಷಿತಿ
34 . . . . . . ಪೊಗಳದಿರ್ಪರಾರ್ವಸುಮತಿಯೊಳು || ಸಾವಂತಮಾಚಿದೇವಂಗೆ . . . . .
35 . . . . ಸೊಗಯ್ಸಿದಂ || ಜಯಗೊಂಡನಹೆತ್ತಿಯಂಣ್ಣಂನಯ
36 . . . . ದೇವಪಾದಪದ್ಮಭ್ರುಂಗನೆನಿಪ್ಪಂ || ಬಮ್ಮೆಯನಾ
37 ಯಕ . . . . ದಿರ್ಮಡಿ . . ನೆಗಳ್ವದಾನಸಾಧ . . . . ಸತ್ಯಸೌಚದೊಳುನೂರ್ಮ್ಮಡಿ . .
38 . . . . ಬಮ್ಮೆಯನಾಯಕಂ . . ಹೆತ್ತಮನಾಳುಕೊಂಡನಂ || ಸ್ವಸ್ತಿಸಮಸ್ತವ
39 (ವ)ಸುಮತೀ . . . ಧರ್ಮ್ಮನಿರ್ಮ್ಮಳ . . . . ಶೌರ್ಯ್ಯಮಂಮೆಱಿವರುಂಸಾವಂತ . . .
40 . . . . ತಲೆಯುಡಿವರುಂರಾಮಲಕ್ಷ್ಮಣ
41 . . . . . ಮಂಡಲೇಶ್ವರರಪ್ಪಸಾವಂತ . . . . . ಸಾವಂತ . . . . . ನಾಯಕನುಂಆಳುಕೊಂದ . . ಕನುಂ
42 ಮಗಬಮ್ಮೆಯನುಂಬಿಟ್ಟಯನುಂಹಿರಿಯಜಯಗೊಂಡನಾಯಕನುಂಮಾಚೆಯನಾಯಕನುಂಹೊಳಲಕೆಱಿಯ . .
43 . . . ಗಾವುಂಡಿ . . . ಳಿದುರ್ಸಕವರುಷ ೧೧೦೮ ವಿಸ್ವಾವಸುಸಂವತ್ಸರದಜೇಷ್ಟಸುದ್ಧತ್ರಯೋದಸಿವಡ್ಡವಾರಉತ್ತರಾ
44 ಯಣಸಂಕ್ರಾಮಾಣಬ್ಯತೀಪಾತದಂದುಶ್ರೀರಾಮನಾಥದೇವರಅಂಗರಂಗರಂಗಭೋಗನೈವೇದ್ಯನಂದಾದೀವಿಗೆಖಂಡ
45 . . . . ತಪೋಧನರಾಹಾರದಾನಕ್ಕಂ . . . . ಸಿಷ್ಯ . . . ಜೀಯ

(ಮುಂದೆ ಬರವಣಿಗೆ ಇಲ್ಲ)

62

ಅದೇ ಹೋಬಳಿ ಹಲಕೂರು ಗ್ರಾಮಕ್ಕೆ ಉತ್ತರ ಕಲ್ಲೇಶ್ವರ ದೇವಸ್ಥಾನದ ಬಳಿ ನಟ್ಟ ಕಲ್ಲು.

ಪ್ರಮಾಣ 5′ 3″×2′ 9″.

1 ಶ್ರೀಮಹಾದೇವಾಯನಮಃ || ನಮಸ್ತುಂಗಸಿರಶ್ಚುಂಬಿಚಂದ್ರಚಾಮರಚಾರವೇ | ತ್ರೈಳೋಕ್ಯನಗರಾ
ರಂಭಮೂ
2 ಲಸ್ತಂಭಾಯಸಂಭವೇ || ಭೇದಂಮೂರ್ತ್ತಿಯೊಳಲ್ಲದೆಆದಂಪರಮಾರ್ತ್ಥತತ್ವದೊಳುಸಲ್ಲದೆನಲುಮೂ
ದೇ
3 ವರಾದಭರದಿಂಮಾದೇವಂದೇವನೀಗೆತಾನೆಮಗೊಳ್ಪಂ || ಸ್ವಸ್ತಿಹೊಯ್ಸಳವಂಶಾಯಯದುಮೂಳಾ
ಯಯದುಭವಃಕ್ಷತ್ರಮೌಕ್ತಿಕಸಂತಾನಂಪ್ರಿಥ್ವೀನಾ
4 ಯಕಮಂಡನಂ || ಮಾಳವರಾಜ್ಯಮ . ಳಮೆನಿಪಗ್ಗದಧಾಳಿಯನಾತ್ಮಸೇನೆಯಿಂಚಾಳ್ಸಿಚಕ್ರವರ್ತ್ತಿಗೆಜ
ಯಂಮಿಗೆತಂನಭುಜಪ್ರತಾ
5 ಪಮಂಪಾಳ್ಸಿದಿಗುಜಯಪ್ರಕಟಕೀರ್ತ್ತಿಪತಾಕೆಯನುತ್ತರಾಸೆಯೊಳುಕೀಲ್ಸಿದಂದಿನೇಶನಗಿದೀಕ್ಷಿಸುವಂ
ತೆಱೆಯಂಗಭೂಭುಜಂ ||
6 ಉಭೆಯಕುಳಸುದ್ಧೆಯೆನಿಪಾಸುಭಲಕ್ಷಣೆಗಂಸುಚರಿತಭರಿತನೆನಿಪ್ಪಾಪ್ರಭುಗಂಮೂವರ್ತ್ತನೆಯರ್ಸ್ಸ್ವಬ
ಗರ್ಬ್ಬಲ್ಲಾಳವಿಷ್ಣುವುದೆಯಾದಿತ್ತ್ಯರು || ದೋ
7 ರಸಮುದ್ರದಲ್ಲಿಜಗದೇವನಸೇನೆಯನಿಕ್ಕಿತಂಮತೋಳುವೀರಸಮುದ್ದ್ರಮಾಗೆಜಯಲಕ್ಷ್ಮಿಗೆತದ್ಗಜವಕ್ತ್ರ
ರಕ್ತಕಾಸ್ಮೀರವಿಲೇಪಮಂನೆಱಪಿತತ್ಪದಕ
8 ಂಬೆರಸೆಯ್ದುಕೊಂಡುದುದಾರಮನಾನ್ರಿಪರ್ತ್ತಳೆದಬೀರಮನಾರೊಗಭೀರಮೆಂನ್ನದರು || ಚೇರಮಬೀರ
ಮಂಬಿಸುಡುಪಾಂಡ್ಯಕಡಂಗದಿರಂಧ್ರರಂಧ್ರಮಂ
9 ಪೋರದಿರೊಡ್ಡಗೌಳ . . ದಂಬಿಡುಮಾಳವಕಾಳಗಕ್ಕೆಮೆಯಿದೋಱದೆಸಾರೆಲೇತಿಗುಳನೀಂಜಗುಳೆಂ
ಬುದಪಾರವೀರದೋರ್ವ್ವಾರಗಭೀರ . . | ತೆವಿನುಶ್ರುತಘೋಷನೆ
10 ಬಲ್ಲುಭೂಪನಂ . ತಲೆಗಾವನಗ . . ಬವರದೊಳೆಲೆಲೆಲೆಯೆಂದೊಡ್ಡಿಸಾರ್ಚ್ಚಿದರೀನ್ರಿಪನಡೆಯಂನೆಲೆ
ಕೊಂಡುವೀರದೊಳ್ಪಂಸಲೆಮೆಱೆವಂವಸುಧೆಹೊಗಳಲುದೆಯಾ
11 ದಿತ್ತ್ಯಂ || ಧುರದೊಳುಬಂದೊಡ್ಡಿವೈರಿಪ್ರಕರಮಿರಲವಷ್ಟಂಭದಿಂಬಿಟ್ಟದೇವಂಕರವಾಳಂತೋಡಿಕೊಂ
ಡಿಂಬಳಿಕವೆಲೆಮಹಾದೇವಕಾಳಾಗ್ನಿರುದ್ದ್ರಂ
12 ಗುರಿಗಣ್ಬಂದಂತೆಮಾಕಾಳಿಗೆ . . ವಡೆಪಂತಿಂದ್ರದಿಗುದಂತಿಸೊಕ್ಕಂಪರಿಪುಂಗೊಂಡಂತಗುರ್ವ್ವುರ್ವ್ವಿ
ಪುದೆನೆಮುಳ್ಸಿಂಮೀಱೆಮಾಱಾಂಪನಾವಂ ||
13 ಚೋಳನಜೂಬುಮಾಳವನಗೋಳ್ಮುರಿಬೀರರನಟ್ಟತಿಂಬಮಾಕಾಳಿವರಾಳನಂತುಳಿವಗಂಧಗಜಂಖಚನ
ಳೈಯಂಬುನೇಪಾಳನಬೆಂನಸಂಮುಟಿಗೆಯಿನಡೆತಂದನೆವೀರವಿಷ್ಣುಭೂ
14 ಳಕನೆಂಬಸಂಭ್ರಮಮೆವೈರಿನ್ರಿಪಾಳಕಮಂಡಳಂಗಳೊಳು || ಎತ್ತದಮುಂನವೆತ್ತಿನಡೆಗೊಳ್ಳದಮುಂನವ
ಡುರ್ತ್ತುಕೋಪದಿಂಮುತ್ತದಮುಂನವತ್ತಮನೆತೆತ್ತಿ
15 ರಿ . . . . ದುರ್ಗ್ಗಮಂಮತ್ತೆ . ವೇಡನಿಗ್ಗವಮಿದೆಂದುವಿರೋಧಿಗೆವೀರಲಕ್ಷ್ಮಿಸಾಱುತ್ತಿರೆವಿಷ್ಣುವಿ
ಕ್ರಮದುಪಕ್ರಮಮಾಕ್ರಮಿಸಿತ್ತುಲೋಕಮಂ || ಕಮಳಾ
16 ಕ್ಷಂಪುರುಶೋತ್ತಮಂವಿಬುಧಲೋಕಾಹ್ಲಾದನಂದ್ವಿಷ್ಟದೈತ್ತ್ಯಮದಧ್ವಂಸನನಂತಭೋಗಯುತನುರ್ವ್ವೀ
ದಾರಧೌರೇಯನುತ್ತಮಸತ್ವಾಂನ್ವಿತನುದ್ಧಯಾದ
17 ವಕುಳಾಳಂಕಾರವೆಂದಿಂತುವಿಷ್ಣುಮಹೀಸಂಸಲೆತಾನೆವಿಷ್ಣುವೆನಿಪಂಲಕ್ಷ್ಮೀವಧೂವಲ್ಲಭಂ || ನಗೆಸುಧೆ
ಯೊಳುನಿಶಾರಮಣನೊಳುವದನಂಸು

18 ರಕುಂಭಿಕುಂಭದೊಳುಬಿಗಿದಕುಚಂಸುರದ್ರುಮದಪಲ್ಲವದೊಳುಕರಪಲ್ಲವಂಗಳಂದೊಗೆದವೆನಿಪ್ಪಪಟ್ಟದಮಹಾಸತಿಲಕ್ಷ್ಮಿಗೆಶೇಷನಾಂತಭೂ

19 ಮಿಗೆಪತಿಯಾದವಿಷ್ಣುಪತಿಯೆಂದಡದೊಪ್ಪುವಳೆಂತುನೋರ್ಪ್ಪಡಂ || ಅವರ್ಗೆಮನೋಜನಂತೆಸುದತೀಜನಚಿತ್ತಮನಿರ್ಕ್ಕೊಳಲುಕೆಸಾಲ್ವವೆಯುವ

20 ಶೋಭೆಯಿಂದತನುವಿಂ . ಬಬಿಧಾನಮನಾನದಂಗನಾನಿವಹಮನೆಚ್ಚು . ಯ್ವವನನೊಮಾನದೆವೀರರನೆಚ್ಚುಯುದ್ಧದೊಳುತವಿಸುವನಾದನಾತ್ಮಭವನಪ್ರತಿಮಂ

21 ನರಸಿಂಹಭೂಬುಜಂ || ಇದಿರಾದರಿಭೂಪಾಳರಮದದಾನೆಯಕೊಂಬನುಡಿದುದಂತದಬಳೆಯುಂಬಿದುವಿನಮುತ್ತಿನಹಾರಮನೊದವಿಸಿಜ

22 ಯಸಿರಿಗೆತೊಡಿಸುವಂನರಸಿಂಹಂ || ಮಾನಿನಿಯೇಚಲದೇವಿಗವಾನರಸಿಂಹಕ್ಷಿತೀಸ್ವರಂಗಂನೆಗಳ್ದಂಭೂನುತವಿಕ್ರಮನಿಧಿಯೆನೆಭಾನುಸುತಪ್ರತಿಮನತಿ

23 ಬಳಂಬಲ್ಲಾಳಂ || ಧರೆಯುಂವಿಕ್ರಾಂತದಿಂದೊಪ್ಪುವನಿಜಭುಜದೊಳುತಾಳ್ದಿಮಾಱೊಂತುನಿಂದಿರ್ದರಿಭೂಪಾಳರ್ಕ್ಕಳಂದಿಕುತಟದಕಡೆವರಂತೂಳ್ದಿ

24 ತದ್ವೀರಲಕ್ಷ್ಮೀವರನಾದಂವೀರಬಲ್ಲುಕ್ಷಿತಿಪತಿಸರಣಾಯಾತರಕ್ಷಕ್ಷಮಂಭಾಸುರತೇಜಂರಾಜರಾಜಂಸಕಳಗುಣಗಣಾಂಭೋಜಿನೀರಾಜಹಂಸಂ || ತ

25 ನಗಂಕಳ್ಪದ್ರುಮಕ್ಕಂವಿತರಣಗುಣದೊಳುಮಚ್ಚರಂಸೂದ್ರಕಂಗಂತನಗಂವಿಕ್ರಾಂತವಿಜ್ರಂಭಿತಭುಜಬಳದೊಳುಮಚ್ಚರಂಮೇರುವಿಂಗಂತನಗಂಪೆಂ

26 ಪುಳ್ಪಬಿಣ್ಪಿಂತಳೆದಮಹಿಮೆಯೊಳುಮಚ್ಚರಂತಾನೆನಲುಧಂನ್ಯನಿಳಾಧೀಶರ್ಕ್ಕಳೊಳುವಿಶ್ರುತವಿಶದಯಸಂವೀರಬಲ್ಲಾಳದೇವಂ || ಮೂಡಲುಸಂಚಳಿಸಿತ್ತುಕಂ

27 ಚಿಹಡುವಲುಪೂಳಿಟ್ಟದಂಭೋಧಿಯೆರ್ದ್ದೋಡಿತಗ್ಗದಚೇರದೇಶವನಿತುಂಪಾಂಡ್ಯಾವನೀಮಂಡಳಂಕಾಡೊಳುಕೂಡೆತೆರಳ್ದುಹೊಕ್ಕಡಗಿದತ್ತುದ್ದಾಮಸಂಗ್ರಾ

28 ಮದೊಳುಕೋಡಿಟ್ಟಂತುಬರ್ದುಂಕುವಂನರೊಳರೇಬಲ್ಲಾಳಭೂಪಾಳನೊಳು || ಘನಶೌರ್ಯ್ಯಂಬಲ್ಲಭೂಪಂನಿಜವಿಜಯಹಯಾರೂಢನಾಗಲುಖಣಿಂಗಂ

29 ವನವಾಸೋದ್ಯುಕ್ತನಾದಂತುಳುವನಳವುಗೆಟ್ಟೋಡಿದಂಕೊಂಕಣಂಭೋಂಕೆನೆಪುಂಣ್ಯಾರಂಣ್ಯವಂಸಂವರಿಸಿದನಗಿದಂಗೂರ್ಜ್ಜರಂಮಾಳವಂವಿಂಧ್ಯನಿಕುಂ

30 ಜಪ್ರಾಪ್ತನಾದಂಜಳಧಿನಿಕಟಮಂಚೋಳಿಕಂವೇಳೆಗೊಂಡಂ || ದಿಗಧಿಪರಂಪಣಂಚಲೆವವಿಕ್ರಮದೇಳ್ಗಿನಗಂಗಳೇಳುಮಂನೆಗಪಲೊಡರ್ಚ್ಚುವುಜ್ಜುಗದತೋ

31 ಳ್ವಲವಾನೆಗಳ್ದರ್ಕ್ಕಬಿಂಬಮಂಗ . . ಪತೀಬ್ರತೇಜಮಿವುತಂನೊಳಿಸಂಮತಮಾದುವೆಂದೊಡಾನ್ರಿಗನಹುಶಾದಿಗಳುದೊರೆಯೆಬಲ್ಲುನ್ರಿಪಾಳನವೀರದೇಳ್ಗೆ

32 ಯೊಳು || ಅಂತುಸೊಗಯ್ಸುವಹೊಯ್ಸಳವೀರಬಲ್ಲಾಳದೇವನರ್ದ್ಧಾಂಗಲಕ್ಷ್ಮಿಸವತಿಮುಖದರ್ಪ್ಪಣೆಸವತಿಯುರವೆಂನಸಂಮಟಿಗೆಬಿರುದಿನಬಿಂಕದಂಕದವಿಳಾಸಮಂ

33 ಮೆಱೆವಸವತಿಯರಮುಖದಕೈವಂದಿಜನಚಿಂತಾಮಣಿಅಭಿನವಪಾರ್ವ್ವತಿಯೆನಿಸಿನೆಗಳ್ದ . . . ತದ್ದರಸಿಬಂಮಲದೇವಿಯಕೀರ್ತ್ತಿಯೆಂತೆಂದಡೆ || ಈಂಗಡಲಸು

34 ತೆಯುಪೆಂಪಂಭಂಗಿಸುವವಿಳಾಸವದ್ದ್ರಿಜಾತೆಯಸುಭಗಂಭಂಗಿಸುವಸುಬಗುಸುಬಗೆನಲೇಂಗಳಬಂಣಿಸುವರಳವೆಬಂಮಲೆವಧುವಂ || ಮಲಮಲ

35 ದುಮಲೆದುಮಲೆಪರಕುಲಮಂಬೇರ್ವ್ವರಸಿಕಿತ್ತುಬಂಮಲೆಮುದದಿಂಫಲಫಲಕುಫಲಕುಫಲಕೆನಲಲೆವಳುಪರಸತಿಯುರವರಕೀರ್ತ್ಯಂನತಿಯಂ ||

36 ಸ್ವಸ್ತಿಸಮಧಿಗತಪಂಚಮಹಾಶಬ್ದಮಹಾಮಂಡಳೇಶ್ವರಂದ್ವಾರಾವತೀಪುರವರಾಧೀಶ್ವರಂತುಳುವಬಳಜಳಧಿಬಡವಾನಳಂದಾಯಾದದಾವಾನಳಂಪಾಂ

37ಡ್ಯಕುಳಕಮಳವನವೇದಂಡಗಂಡಭೇರುಂಡಮಂಡಳಿಕಬೇಂಟೆಕಾಱಪರಮಂಡಳಸೂಱೆಕಾಱಸಂಗ್ರಾ
ಮಭೀಮಕಲಿಕಾಲಕಾಮಸಕಳವಂದಿಬ್ರಿಂ
38ದಸಂತರ್ಪ್ಪಣಸಮರ್ತ್ಥವಿತರಣವಿನೋದವಾಸಂತಿಕಾದೇವೀಲಬುಧವರಪ್ರಸಾದಮ್ರಿಗಮದಾಮೋದ
ನಾಮಾದಿಪ್ರಸಸ್ತಿಸಹಿತಂಶ್ರೀಮನು
39ಮಹಾಮಂಡಳೇಶ್ವರಂತಳಕಾಡುಕೊಂಗುನಂಗಲಿಗಂಗವಾಡಿನೊಳಂಬವಾಡಿಬನವಸೆಹಾನುಂಗಲುಗೊಂ
ಡಭುಜಬಳವೀರಗಂ[ಗ]ನಸಹಾ
40ಯಸೂರನಿಸ್ಸಂಕಪ್ರತಾಪಹೊಯ್ಸಳವೀರಬಲ್ಲಾಳದೇವರುಸಕಳಮಹೀಮಂಡಳಮಂದುಷ್ಟನಿಗ್ರಹಸಿಷ್ಟ
ಪ್ರತಿಪಾಳನಂಗೆಯ್ದು ರಕ್ಷಿಸುತ್ತಂದೋರಸಮು
41ದ್ರದನೆಲೆವೀಡಿನೊಳುಸುಖಸಂಕಥಾವಿನೋದದಿಂರಾಜ್ಯಂಗೆಯ್ವುತ್ತಮಿರೆತದೀಯಪಾದಪದ್ಮೋಪಜೀವಿ
ಬಂಮಲದೇವಿಯರಮಾವಬಲ್ಲಾಳನಕೀರ್ತ್ತಿಯಂಪೇಳ್ವಡೆ
42ಚದುರರೊಳತಿಚದುರಂಬುಧತತಿಯೊಳುಬುಧತತಿಸಮಂತುಗಾಯಣಂಗಾಯಣರೊಳುಮತಿವಂತಂಮ
ತಿವಂತರೊಳತಿಚದುರಂಚದುರನನು
43ಪಮಂಬಲ್ಲಾಳಂ || ಮತ್ತಂಹೊಯ್ಸಳದೇಶದಭಂಡಾರವಾಡದೂರ್ಗ್ಗಳೊಳುಪೆಸರ್ವೆತ್ತಹಲುಕೂರಮ
ಹಾಪ್ರಭುಗಳಕೀರ್ತ್ತಿಯೆಂತೆಂದಡೆ || ಕೆಱೆಗಳನೆಯ್ದೆಕ
44ಟ್ಟಿಸಿದರೆತ್ತಿಸಿದರ್ನೆಱೆದೇಗುಲಂಗಳಂಮಱೆವುಗೆಕಾವರಾವವರುಮಂಸರಣಾಗತವಜ್ರಪಂಜರರ್ಕ್ಕಱೆ
ಕೊರಳೀಶಪಾದಪದ್ಮೋತ್ಕರಭ್ರಿಂಗರೆನುತ್ತೆ
45ಕೀರ್ತ್ತಿಸಲುಪಱವಡಿವೆತ್ತರಿಂತುಹಲುಕೂರಮಹಾಪ್ರಭುಗೌಡರೆಲ್ಲರುಂ || ಘನಶೌರ್ಯ್ಯಂಮೂರ್ತ್ತಿ
ಯುಂಮನುಮಾರ್ಗ್ಗಂಬಿಂಣಗೌಡನಾತನತನೆಯಂ
46ಜನವಿನುತಕೇತಗೌಡಂತನಗಯ್ಯನದೆಂತುವಧಿಕನೀನರಸಿಂಹಂ || ಈವಗುಣಂವೇಡಲೊಡಂಕಾವಗು
ಣಂಭೀತಿಯಿಂದೆಮಱೆವುಗಲೆನಸುಂಭೂವಿನುತಮಾ
47ಗಿತೋರ್ಪ್ಪುವುಭಾವಕನಿಧಿನಾರಸಿಂಹಗೌಂಡನೊಳೆನಸುಂ || ಹಿರಿಯಯ್ಯಮುದ್ದಗೌಡಂವರಗುಣಿತಾಂ
ಚಿಕ್ಕಮಾಚಗೌಂಡಂಜನಕಂಕರೆದೀವದಾನಿತಾನೆನೆ
48ಧರೆಗನುಪಮವಾಯ್ತುಮುದ್ದಗೌಂಡನೆಧನ್ಯಂ || ನೋಡಲ್ಕತ್ತಳಗಂಸಹಸ್ರನಯನಂಗಂರೂಪುಮಾ
ರ್ಕ್ಕೊಂಡುಮಾತಾಡಲುಕದುಭುತವಂತಕಂಗವೆನಸು
49ಂವಿಕ್ರಾಂತಸತುಕೀರ್ತ್ತಿನಿಳ್ದಾಡಲುಕಿಟ್ಟಿಡೆವಾರ್ದ್ಧಿವೇಷ್ಟಿತಧರಾಚಕ್ರಂದಲೆಂದೊಲ್ದುಮಾತಾಡುತಿರ್ಪ್ಪು
ದುಮುದ್ದಗೌಂಡನಗುಣಬ್ರಾತಂಗಳಂವಂದಿಗಳು ||
50ಉತ್ತಮನೂರ್ಜ್ಜಿತನೆನಸಿದಮುತ್ತ್ಯೆಯಂದಾಸಗೌಂಡನನುಪಮತೇಜಂಹೆತ್ತ್ಯೆಯನಲುತೇಜಕ್ಕಣನತ್ಯ
ಧಿಕಂದಾಸಗೌಂಡನೀಸನದಾಸಂ || ನುಡಿದನುಡಿತಾಂಬ್ರಸಾ
51ಸನಂಪಡೆದಧನಂಸದುಬುಧರ್ಗ್ಗಮಾತ್ತ್ಯರೊಳಧಿಕಂಪೊಡವಿಯೊಳೆತೋರ್ಪ್ಪಸುರತರುಪಡೆಮಾತೇಂ
ದಾಸಗೌಂಡನೀವಸುಮತಿಯೊಳು || ಕಾಡಗವುಂಡನತಂಮಂ
52ರೂಡಿಯನೆಗಳ್ದಿದಚೌಂಡಗೌಂಡನಪುತ್ರಂಬೇಡುವವಂದಿಗೆಕರ್ಣ್ಣಂನಾಡೆಯುವೆನೆಬಿಕ್ಕಗೌಂಡಮಿಕ್ಕಂಧ
ರೆಯೊಳು || ಗೋತ್ರಪವಿತ್ರಂಸದುಗುಣಿಕೀರ್ತ್ತಿಯು
53ತವೆತಾನೆನುತ್ತವೀವಸುಮತಿಯೊಳುಧಾತ್ರಿಹೊಗಳುತ್ತವಿರ್ಪ್ಪುದುಸೂತ್ರಿಸಿದವೊಲೊಲ್ದುಬಿಕ್ಕಗೌಂಡನೆ
ಧನ್ಯಂ || ನೀಲಗೌಂಡನಪುತ್ರಂಲೀಲೆಯೊಳಾಕೇತಗೌಂಡನೀ
54ವರದೇವಂಲೋಲಾಕ್ಷಿಗಳುಗೆಕಾಮಂಸಾಲಿಡುವಂಹಲವುಹೊನ್ನನರ್ತ್ತಿಜನಕ್ಕಂ || ಸ್ವಸ್ತಿಸಮಸ್ತಗುಣ
ಸಂಪನ್ನರುಂಸರಣಾಗತವಜ್ರಪಂಜರರುಂಮಱೆವುಗೆ
55ಕಾವರುಂತಪ್ಪೆತಪ್ಪುವರುಂಇದಿರಾಂತರನಾಹವದೊಳಿಕ್ಕಿಶೌರ್ಯ್ಯಮಂಮೆಱೆವಸಾಹಸೋತ್ತುಂಗರುಂ
ಉಭಯನಾಡೊಳುಪೆಸರ್ವೆತ್ತಮಹಾಪ್ರಭುನಾಳ್

56ಗೌಂಡುಗಳುಮೆನಿಸಿಸೊಗಯ್ಸುವಹಲುಕೂರಮಹಾಪ್ರಭುನಾರಸಿಂಗಗೌಂಡನುಂಮುದ್ದಗೌಂಡನುಂ
ದಾಸಗೌಂಡನುಂಬಿಕ್ಕಗೌಂಡನೊಳಗಾದಸ
57ಮಸ್ತಪ್ರಜೆಗೌಂಡುಗಳುಮಿರ್ದ್ದುಸಕವರುಶ ೧೧೦೦ ನೆಯಹೇಮಣಂಬಿಶಂವತ್ಸರದಭಾದ್ರಪದಸುದ್ಧತ್ರ
ಯೋದಸಿವಡ್ಡವಾರಉತ್ತರಾಯಣಸಂಕ್ರ
58ಮಾಣಬ್ಯತೀಪಾತಸೋಮಗ್ರಹಣದಂದುಶ್ರೀಕಲಿದೇವರನೈವೇದ್ಯನಂದಾದೀವಿಗೆಯುಂಗಭೋಗರಂಗ
ಭೋಗಖಂಡಸ್ಫುಟಿತಜೀರ್ನ್ನೋದ್ಧಾರಕ್ಕಂಮಠಪತಿತಪೋ
59ಧನರಾಹಾರದಾನಕವಾಗಿಸ್ವಸ್ತಿಯಮನಿಯಮಶ್ವಾಧ್ಯಾಯಧಾನಧಾರಣಮೋನಾನುಷ್ಠಾಣಜಪಸಮಾ
ಧಿಶೀಲಗುಣಸಂಪಂನರುಲಾಕುಳಾಗಮಸಮಯ
60ಸಮುದ್ಧರಣರುಂಎಕ್ಕೋಟಿಮುನೀಂದ್ರವಂದನಾನಂದರುಂಕಾಳಾಮುಖಪ್ರತಿಬದ್ಧರುಂಶ್ರೀರಾಮನಾಥ
ದೇವರಪಾದಾರಾಧಕರುಮಪ್ಪಕೇತಜೀಯರಶಿಸ್ಯ
61ದೇವೇಂದ್ರಶಕ್ತಿಪಂಡಿತರುಅವರಗುಡ್ಡಿಪ್ರತ್ತ್ಯಕ್ಷಗಂಗೆದೇಕವ್ವೆದೇವೇಂದ್ರಸಕ್ತಿಪಂಡಿತರಸಿಸ್ಯರಾಮಸಕ್ತಿ
ರಾಮಸಕ್ತಿಯಸಿಸ್ಯಕಲ್ಯಾಣಸಕ್ತಿಕಲ್ಯಾಣ
62ಸಕುತಿಯಸಿಸ್ಯವಾಮಸಕುತಿವಾಮಸಕ್ತಿಯಸಿಸ್ಯಮಹದೇವಜೀಯಮಹದೇವಜೀಯರಸಿಸ್ಯಚಿಕ್ಕ
ಕವಿಜೀಯನಿಂತೀಮುನಿಸಮೂಹದಕ್ಕಾ
63ಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿಟ್ಟದತ್ತಿದೇವರಮುಂದಣಹಿರ್ಯ್ಯಕೆಱೆಯಕೆಳಗೆಗದ್ದೆಸಲಗೆ ೪
ಮತ್ತಿಯಕೆಱೆಯಕೆಳಗೆಗದ್ದೆಸಲಗೆ ೧ ಬಬ್ಬಿ
64ಯಕೆಱೆಯಕೆಳಗೆಗದ್ದೆಕೊಳಗ ೫ ಅಣಿಯಕೆಱೆಯಕೆಳಗೆಕೊಳಗ ೫ ದೇವರಮುಂದಣಕೆಱೆಯಕೆಳ
ಗೆತೋಟದಸ್ಥಳವಡಕೆಯಮರ ೬೦೦ ಬೆದ್ದಲೆವಿನಾ
65ಯಕನಮುಂದಣಹಾಳಕೆಯಿಕಂಮ ೨೦೦ ದೇವರಹತ್ತಿರೆಮೂಡಣಕೆಯಿಕಂಮ ೨೦೦ ತೋಟದಬ
ಳಿಯತೆವರಹರಳಕೆಯಿ ೪೦೦ ಆನೆಯಬೆನಕಂಗೆ
66ಗದ್ದೆದೇವಾಲಯದಿಂಮೂಡಲುಕೊಳಗಂ ೧೦ ಬೆದ್ದಲೆವಿನಾಯಕದೇವರಮುಂದಣಹಾಳಕೆಯಿಕಂಮ
೨೦೦ ಇಂತೀಧರ್ಮ್ಮಮಂಪ್ರತಿಪಾಳಿಸಿದವರುಗಂ
67ಗೆವಾರಣಾಸಿಕುರುಕ್ಷೇತ್ರದೊಳುಸಹಸ್ರಕವಿಲೆಯಕೋಡುಂಕೊಳಗುಮಂಹೊನ್ನಲುಕಟ್ಟಿಸಿಸಹಸ್ರವೇದ
ಪಾರಗರಪ್ಪಬ್ರಾಹ್ಮಣರಿಗೆಕೊಟ

(ಮುಂದೆ ಬರವಣಿಗೆ ಇಲ್ಲ)

ಅದೇ ಕಲ್ಲಿನ ಎಡ ಭಾಗದಲ್ಲಿ.

68ಶ್ರೀಮಹಾಗಾವು . .
69ಹಲುಕೂರಪ್ರಭುಗಳಕೇತಿ .
70ಯಂ . . . ||
71 . ವಿನಾ . ದೇವಗವುಂಡ . ತನ .
72ಕೇತಅತನಮಕಳು . . .
73 ಆವರುಕೂಂಚಿಗರು || ಬೊಂಮಕೇತಿ
74ದಾಸಿಗೌಂಡನಮಗಬೊಂಮಗೌಡನ
75ಮಕಳು ೩ ಮುವರು | ಅವರಿ
76ಭರುಗವುಡುಗಳುಮುಭರು .
77ರ್ಮ್ಮಕಥಾ . . ಗೌಳಿಕಿಸು . ತಳನ .
78. . . . .
79ಮಕಳು . . . ಮಿಗವು
80ಡನಮಗಮಾದಿಗೌಡ
81ದಾಸಗೌಡನಮ[ಗ]ಕಲ್ಲಗೌ
82ಡಕೇತಗೌಡಬಂಮಗೌಡ
83ಬಂಮಗೌಡನಮಗತಂ
84ಮಗೌಡಬೀರಣಗೇತಿಸೆ
85ಟ್ಟಿಯಬಂಮಗೌಡಕಲಿ

86 ದೇವಜೀಯನಮಗಕಲ್ಲಜೇ
87 ಯಮೇಳೇಸ್ವರದೇವರಸ್ಥಾನಿ
88 ಕಭೀಮಜೀಯನಮಗಸಾತ
89 . ಯಗೌಜೇಸ್ವರದೇವರಸ್ಥಾನಿಕ
90 ಮಲಜೀಯನಮಗದೇವಜೀಯ
91 ಕಮಟೇಸ್ವರಸ್ಥಾನಿಕಬೈರಜೇ
92 ಯನಮಗಗೌವಜೀಯಇಂ
93 ತಿವರುಮುಖ್ಯವಾದಸಮ
94 ಸ್ತಪ್ರಜೆಗಳುಜೆಡಗೊತ್ತಳಿಹ
95 . . ಡುಹಿಟನಬೆಸವಕ
96 ಳುಂ . ಮಡುವಸಾಯಿತ
97 ಇಟಿಕಾಐಬೊಂಮೆವೆ
98 ನಾಯಕಂಗೆಗೌಡಿಕೆ
99 ಯಾಗಿಕೆಐಿಯಸಂಥೆ
100 ಯಬೊಂಮದೇವರಿಂ
101 ಪಡುವಮೂಳಿಯಬೊಂ
102 ಮೆಯನಕಟೆಯಬಡಗ
103 ಇಕಿದಗದೆಸಲಗೆ ಲ ಆಬಂ
104 ಮದೇವರಮೂಡಲುದೇ
105 ವದಾನದಿಂತೆಂಕಲುಮಾ
106 ಚಿಗೌಡನಉಂಬಳಿಯಂಬಡ
107 ಗಮೂಡ . . ಗರಮರೆ
108 ಯಾಗಿಇಕಿದಬೆದಲು
109 . ಂಬ ೮೦೦ ಗೌಡಿಕೆಯಕೆ
110 ಳಮನೆ . ಗೌಡಿಕೆನಾಯಕ
111 ನಹೆಂಣುಗಂಡಿಗೆಸಲುಉ
112 ದುಮುಂನಬಳ ೫ ನಾಯಕ
113 ಕೂಡಿ ೬ ಒಳಗಾಗಿಕೂಡಿ
114 ನಡವರು . . . . .
115 ಶ್ರೀಕಲಿನಾಥ | ಶ್ರೀಮೇಳೇಸ್ವ
116 ರ | ಶ್ರೀಗೌಜೇಸ್ವರ | ಶ್ರೀಕ
117 ಮಟೇಸ್ವರ | ಶ್ರೀಮೇಳೇಸ್ವರ
118 ಶ್ರೀಕಮಟೇಸ್ವರ | ಶ್ರೀಬಿರಾಡ
119 ನಾಥ | ಶ್ರೀಬಿಲೇಸ್ವರ
120 ಮಾಚೇಸ್ವರ | ಬೋಪು

(ಮುಂದೆ ಬರವಣಿಗೆ ಇಲ್ಲ)

63

ಅದೇ ದೇವಸ್ಥಾನದ ಬಳಿ ನೆಟ್ಟಿರುವ ಮುರಕ ಕಂಭದ ಮೇಲೆ.

ಪ್ರಮಾಣ 3′×1′ 6″.

1 ಶಕವರುಷ ೧೨೯೭ ನೆಯಆನಂದಸಂ
2 ವತ್ಸರದಜೇಷ್ಟಬ ೫ ಮಂ ಹೊಂನವಳಿ
3 ಯಶ್ರೀಮದಶೇಷಮಹಾಜನಂಗ
4 ಳುಹಲುಕೂರಬೊಂಮಗಉಡಮದಿಗ
5 ಉಡನಾ[ಗ]ಗಉಡಕೇತಗಉಡನೊಳಗಾದ
6 ಸಮಸ್ತಗಉಡುಪ್ರಜೆಗಳಿಗೆಕೊಟ್ಟಪರಿವ
7 ರ್ತನಶಾಸನದಕ್ರಮವೆಂತೆಂದರೆಆ
8 ಹೊಂನವಳಿಯಕಾಲವಳಿಭಗವತಿ
9 ಘಟ್ಟದಲುತುಳಿಲೆಯಹಳಿಯಹೊಲಸೀ
10 ಮೆಯಿಂತೆಂಕಲುಹೊಸಕಟ್ಟೆಯಿಂಪಡು
11 ವತೆಂಕಲಾಗಿ ೭ಳ ವೆಟ್ಟಸಿಗಳೆಯ ೫ ಬಕಂ
12 ಬ ೪೩೦ ಕೊಟ್ಟುಹಲುಕೂರಕಾಲುವಳಿ
13 ತುಳಿಕೆಯಹಳಿಯಬೂದನಹಾಳು
14 ಭಗವತಿಘಟ್ಟದಭೂಮಿಯಿಂಬಡಗ
15 ಲುಸುತ್ತಣಹಳಮೇರೆಯಚತುಸೀ
16 ಮೆಯಭೂಮಿಕಂಬ ೪೩೦ಕೊಂಡುತಂ
17 ಮೊಳುಸರ್ವೈಕಮತ್ಯವಾಗಿವೊಡಂಬಟು
18 ಕೊಟ್ಟಪರಿವರ್ತ್ತನದಶಾಸನ

64

ಅದೇ ದೇವಸ್ಥಾನದ ಬಳಿ ನೆಟ್ಟಿರುವ ಕಲ್ಲು.

1ಜಿತೇನಲಭ್ಯತೇಲಕ್ಷ್ಮೀರ್ಮ್ರ . . . .
2 . . . . . ನೇಕಾಯೇಕಾಚಿಂತಾಮರಣೇರಣೇ
3ಸ್ವಸ್ತಿಶ್ರೀಮತುಸಾಧಾರಣಸಂವತ್ಸರದ . . . ಆಶ್ವಯಿ
4 . . . ಪಂಚಮಿಬ್ರಿಹವಾರದಂದು . . . ಬ . . ಗೆಜಿೆಯು
5 . . . .

65

ಅದೇ ಸ್ಥಳದಲ್ಲಿ.

1 . ತೇನಲಭ್ಯತೇಲಕ್ಷ್ಮೀರ್ಮ್ರತೇನಾಪಿಸುರಾಂಗನಾ . . . . .
2 . . . . . ಕ್ಷಣವಿಧ್ವಂಸನೇಕಾಯೇಕಾಚಿಂತಾಮರಣೇರಣೇ . .
3ವಿಕ್ರಮಸಂ | ಭಾದ್ರಪದಬ ೧೪ ಮ | ದಿನಹಲು . . .
4ಲ್ಲಗುರುಗಳಮಗಮಲ್ಲಯ್ಯನುಹಲುಕೂ
5ರಬಾಗಿಲಲುಕಾದಿಕವಿಳಾಸಪ್ರಾಪ್ತನಾದನು

66

ಅದೇ ಸ್ಥಳದಲ್ಲಿ.

1ಶ್ರೀರಾಮಶರಣು || ನಮಸ್ತುಂಗಶಿರಸ್ತುಂಬಿಚಂ
2ದ್ರಚಾಮರಚಾರವೇ || ತ್ರೈಳೋಕ್ಯನಗರಾರಂಭಮೂಲ
3ಸ್ತಂಭಾಯಶಂಭವೇ || ಸ್ವಸ್ತಿಶ್ರೀಜಯಾಭ್ಯುದಯಶಕವ
4ರುಷದ ೧೨೫೨ ಡೆನೆಯಪ್ರಮೋದೋಥಸಂವತ್ಸರದಆಶ್ವೀಜಶುದ್ಧ ೧೨ ಸೋಮವಾ
5ರದಂದುಶ್ರೀಮತ್ಪ್ರತಾಪಚಕ್ರವರ್ತ್ತಿಹೊಯಿಸಣಶ್ರೀವೀರಬಲ್ಲಾಳ
6ದೇವರುವಿರುಪಾಕ್ಷಪಟ್ಟಣದನೆಲೆವೀಡಿನಲಿಸುಖಸಂಕಥಾವಿನೋ
7ದದಿಂರಾಜ್ಯಂಗೆಯಿವುತ್ತಿರೆಶ್ರೀಮನುಮಹಾಪ್ರಧಾನಂಸೋಮೆಯ

(ಮುಂದೆ ಬರವಣಿಗೆ ಇಲ್ಲ)

67

ಅದೇ ಹೋಬಳಿ ಮಾಡಾಳು ಗ್ರಾಮದ ಬಸವೇಶ್ವರದೇವಸ್ಥಾನದಲ್ಲಿ ನೆಟ್ಟಿರುವ ಕಲ್ಲು.

ಪ್ರಮಾಣ 3′ 6″ × 1′ 8″.

1ಯಿವಸಂವತ್ಸರದಪುಶ್ಯಶುಧ ೧೦ ಗುರುವಾರದಂದು
2ಸ್ವಸ್ತಿಶ್ರೀವೀರಪ್ರತಾಪಚಕ್ರವರ್ತ್ತಿಹೊಯಿಸಣಶ್ರೀ
3ವೀರಬಲ್ಲಾಳದೇವರುಪ್ರಿಥ್ವೀರಾಜ್ಯಂಗೆಯಿವಲ್ಲಿಶ್ರೀಮದ

4 ನಾದಿಅಗ್ರಹಾರಂಬಲ್ಲಾಳಪುರವಾದಕಿತ್ತನಕೆಱೆಯ
5 ಶ್ರೀಮದಶೇಷಮಹಾಜನಂಗಳೂಶ್ರೀಮನುಮಹಾಪ್ರಧಾನಂಪೊ
6 ಂನಣ್ಣನವರಮಕ್ಕಳುಕಾಮೆಯದಂಣ್ಣಾಯ್ಕರಿಗೆಅರೆನಕೆಱೆ
7 ಯಸ್ತಳವಾಳುವಲ್ಲಿಆಕಿತ್ತನಕೆಱೆಯಸ್ತಳವೆಲ್ಲವುಹಾಳಾಗಿಯಿ
8 ದ್ದಲ್ಲಿಆಕಿತ್ತನಕೆಱೆಯನೂಮರಳಿಜೀರ್ನೋದಾರವಮಾಡಿದರಾ
9 ಗಿಆಕಾಮೆಯದಂಣ್ಣಾಯ್ಕರಅನುಮಥದಿಂಆಮಹಾಜನಂ
10 ಗಳೂಶ್ರೀಮನುಮಹಾಪಸಯಿತರೂಮಪ್ಪನಾಚೆಯಹೆಂಗಡೆಯರಮ
11 ಕ್ಕಳುನಾಚಪ್ಪದೇವಪ್ಪನವರೂಆಮಾಳೆಯ್ಯರಾಮಿಸೆಟ್ಟಿಯರಮಗಕ
12 ಲಗವುಡಂಗೆಕೊಟ್ಟಸಾಸನದಕ್ರಮವೆಂತೆಂದರೆಆಕಿತ್ತನಕೆಱೆ
13 ಯಕಾಲುವಳಿಮಾಡಹಳನೂಸಬ್ಬಗೊಡಗಿಯಾಗಿಕೊಟೆವಾಗಿ
14 ಅಡಕುಳಾಚತುಸೀಮೆವೊಳಗಾದಭೂಮಿಗದ್ದೆಬೆದ್ದಲುಮುಂತಾಗಿ
15 ಹೊಲವೇರೆಯಸುತಣನಾಲ್ಕುಮೂಲೆಗೂಕಲ್ಲನೆಟ್ಟುಕೊಟೆವುನೆಕಿಗಡಿ
16 ಯೆಚವುಗಾನೆಮುಂತಾಗಿಆಮಾಡಹಾಳುಮರುಗೊಡಗಿಯ್ಯಾಗಿಸಲ
17 ವುದುವುರಮುಂದೆವುಕಲನೆಟ್ಟುಕೊಟ್ಟೆವುಆಕಲಗಳನುಶುಖದಿಂಬಾಳ್ವಂತಾ
18 ಗಿಕೊಟವಳಿಯಶಾಸನಆಮಹಾಜಾನಂಗಳುಹಿರಿವುರಗವುಡಿಕೆಯಕೊಟದುಆವೂ
19 ರವೊಳಗೆಬಂದುಮನೆಸಂಥೆಗೆತಪುನ . ಣಿಸೆಯಮೂಡಗದೆಯೆರಡುಸಲಗೆ
20 ಮುದುವಯಲನರಸಿಹ್ವದೇವರಗದೆಯಿಪಡುವಗದೆಸ ೨ ಗೆಯೆರಡುಚೆತುರಷ್ಟಬೆ
21 ದಲುಬಂದುಕಳನನೂಕಲ್ಲನೆಟ್ಟುಕೊಟೆವುಆಹಿರಿವುರಬಳಗೆಆಯದಾಯ
22 ಮಾನ್ಯಾಮಂನಣಿಸಲುವುದುಯೆಂದುಂಮಹಾಜಾನಂಗಳುಆನಾಚ
23 ಪ್ಪದೇವಪ್ಪನವರೂಆಗೂಳಿಯ್ಯಕಲಗವುಡಂಗೆಕೊಟ್ಟಸಾಸನಆಮಹಾಜಾನಂ
24 ಗಳಿಗೆಆಕಲಗವುಡನೂಕೊಡಗಿದೆಱೆಯಾಗಿಯಿಕ್ಕಿಬಹದುಅಳಿವುಅಂ
25 ನ್ಯಾಯಕಟ್ಟುಗೂಳುಕಟ್ಟಳಿಸೇಸೆಅಪ್ಪೂರ್ಬಾಯಸಪೂರ್ಬಾಯವುತ್ಸಹಾವೂ
26 . . ಮುಂತಾಗಿಸರ್ವ್ವಬಾಧೆಪರಿಹಾರವಾಗಿಆಹಿರಿವುರಕೊಡಗಿಗೆವುಆಮ
27 ಡಹಾಳಿಗೆವುಕೂಡಿವರುಷ ೧ ಕೆ ಗ ೯ ನೂಮುಕ್ಕಂದಾಯವಾಗಿಯಿಕ್ಕ
28 ತ್ತಬಹನೂಯೀಮರಿಯಾದೆಯಲುಪ್ರತಿವರುಷಂಗಳಲೂಯಿಕಿಭೋಗಿ
29 ಸುತಬಹನೆಂದುಆಮಹಾಜಾನಂಗಳೂಆನಾಚಪ್ಪದೇವಪ್ಪನವರೂಆಗೂ
30 ಳಿಯ್ಯಕಲಗವುಡಂಗೆಕೊಟಸಾಸನಯಿಂತಪ್ಪುದಕೆಆಮಹಾಜಾನಂಗಳ
31 ಆಕಾಮೆಯದಣ್ಣಾಯ್ಕರ . . . ವೊಪ | ಆನಾಚಪ್ಪದೇವ . .

(ಮುಂದೆ ಸವೆದು ಹೋಗಿದೆ)

68

ಅದೇ ಹೋಬಳಿ ಕಿತ್ತನಕೆರೆ ಗ್ರಾಮದ ನರಸಿಂಹದೇವಸ್ಥಾನದ ಕೈಸಾಲೆಯಲ್ಲಿ ನೆಟ್ಟಿರುವ ಕಲ್ಲು.

ಪ್ರಮಾಣ 6′× 1′ 9″.

1 * ದಂಷ್ಟ್ರಾಗ್ರೇಣಮಹೀಂಮಹಾಸುರಮಹೋಧೃತ್ವಾವಿಜಿತ್ವಾಸ್ಥಿತಃಕೃತ್ವಾಲೋಕಹಿತಂಪ್ರಭಾವಜನಿತಂ
ಶ್ರೀಮದ್ವರಾಹೋಯುದಾಯ . . . .
2 ಷುಸುರಾಸ್ಸಮಸ್ತರುಷಯಸ್ಸರ್ವ್ವಂಜಗತ್ಸಂಸ್ಥಿತಂಲೋಕಂಲೋಕಪತಿಃಪುರಾಣಪುರುಷಃಪ್ರೀತಸ್ಸದಾಪಾ
ತುವಃ || ಶ್ರೀಶ್ರೀಶ್ರೀ
3 ಶ್ರೀಲಕ್ಷ್ಮೀನ್ರಿಸಿಹ್ವಾಯನಮಃ || ಹಂಹೋಧೀರವರಂಗೃ
4 ಹಾಣರುಜಿನಪ್ರೀತೋಹಮಿತ್ಯೇವತೇಪ್ರೀತಿರ್ಬ್ಭಕ್ತಿರುಪಾತ್ತ
5 ಭಾವನತಯಾಪಾರಂಪರಾಹೋಮಯಿಶ್ರೀಮತುಕೀರ್ತಿಸಮು
6 ದ್ರಸಜ್ಜನಪತಿರ್ಲ್ಲಕ್ಷ್ಮೀನ್ರಿಸಿಹ್ವಸ್ತದಾಪ್ರಹ್ಲಾದಾಯದದಾತಿವಾಂಛಿತಮಿವಪ್ರಾ
7 ಯೋದದಾತುಪ್ರಭುಃ || ಬ್ರಹ್ಮಣೋತ್ರಿರಭೂತ್ತಸ್ಮಾತ್ಸೋಮಸ್ತಸ್ಮಾದ್ಬು
8 ಧಃಪರಃತತೋಪುರೂರವಸ್ತಸ್ಮಾದಾಯುಶೋನಹುಶಸ್ತತಃ || ಕೇನ
9 ಚಿನ್ಮುನಿನೋಕ್ತೋಹಿಸಳೋಹೊಯಿಸಣಯಿತ್ಯಪಿಯೆಱೆಯಂಗಸ್ತತೋ
10 ಜಾತೋಬಿಟ್ಟಿದೇವಸ್ತತೋಭುವಿ || ಬಿಟ್ಟಿದೇವಾತ್ಮಜೋಲೋಕೇನಾರಸಿಂಹೋಧರಾ
11 ಪತಿಃಯಶೋಯಸ್ಯಹರತ್ಯೇತದ್ವಿಪತ್ಕಾಳಾಹಿದುರ್ವ್ವಿಶಂ || ತತ್ಪು
12 ತ್ರೋಪಿಯಶೋಪತಿರ್ವಿಜಯತೇಪ್ರತ್ಯಕ್ಷಲಕ್ಷ್ಮೀಪತಿಃಕಾಬ್ಯೇಸೇಬ್ಯಮತಿ
13 ಸ್ಸಖೇಸುರಪತಿರ್ಮ್ಮಾರ್ತ್ತಂಡತೇಜೋಧೃತಿಃಸಂಗ್ರಾಮೇವಿಜಯೀಪತಿರ್ಗ್ಗಜಪತಿಃ
14 ಪ್ರಖ್ಯಾತವಿದ್ಯಾಪತಿರ್ಲ್ಲೋಕೇಸತುಕವಿವಾದಿನಾಮಧಿಪತಿರ್ವ್ವಲ್ಲಾಳಪ್ರಿಥ್ವೀಪತಿಃ
15 ಅಗ್ನಿಷ್ಟೋಮಾದಿವಾಕ್ಯಕ್ರತುಷತನಿಯಮಪ್ರಾಪ್ತಧರ್ಮ್ಮಪ್ರಧಾನಾಯೇವೇದಾ
16 ಚಾರಸೌಖ್ಯಸ್ಮ್ರಿತಿಮಿತಯಜನಶ್ರೌತಕರ್ಮ್ಮೈಕನಿಷ್ಠಾಃಶಾಸ್ತ್ರಾಲಂಕಾರಕಾಬ್ಯಸ್ವ
17 ಮತರತವಚಸ್ತರ್ಕ್ಕವಿದ್ಯಾವಿಶೇಶಾಸ್ತೇಭ್ಯೋಬಲ್ಲಾಳದೇವೋದದದತಿವಿಭವಂ
18 ಕೀರ್ತ್ತಿರತುನಾಕರಂಹಿ || ದೇಶಾದುತ್ತರನಾಮತಸ್ಥಿರತರಂಶೃತ್ವಾಗತೇಭ್ಯೋಯು
19 ಶಃಕರ್ಣ್ಣಾಟೋತ್ತಮವರ್ಣ್ಣಪೂರ್ಣ್ಣಜನಿತಪ್ರೌಢಪ್ರಿಯೇಭ್ಯೋದದತ್ಸಂಕ್ರಾನ್ತೇದಶಕ
20 ದ್ವಯೋತ್ತರಶತಂಶ್ರೀತುಂಗಭದ್ರಾತಟೇಶ್ರೀಬಲ್ಲಾಳಪುರಂಹಿಕೀರ್ತ್ತಿಜಲಧಿಂಬಲ್ಲಾ
21 ಳಪೃಥ್ವೀಪತಿಃ || ವೀರಃಕೋನಾರಸಿಹ್ವಸ್ಸಕಳಕವಿಜನಪ್ರೌಢಧೀರ್ನ್ನಾರಸಿಹ್ವಃಖ್ಯಾತಃ
22 ಕೋನಾರಸಿಹ್ವೋಮಗರಬಲಹರಃಕ್ರೀಡಯಾನಾರಸಿಹ್ವಃಚೋಳಸ್ಯಾಧಿಕ್ಯತಾಯಾಂ
23 ಪುನರಪಿಕುರುತೇಸಂಸ್ಥಿತಿಂನಾರಸಿಹ್ವಃಶ್ರೀಮದ್ಬಲ್ಲಾಳಸೂನುರ್ವ್ವಿಜಯಪತಿ
24 ರಸೌಶೋಭತೇನಾರಸಿಹ್ವಃ || ಸ್ವಸ್ತಿಸಮಸ್ತಭುವನಾಶ್ರಯಂಶ್ರೀಪ್ರಿಥ್ವೀವಲ್ಲಭಂ
25 ಮಹಾರಾಜಾಧಿರಾಜಂಪರಮೇಶ್ವರಂಪರಮಭಟ್ಟಾರಕಂದ್ವಾರಾವತೀಪುರವರಾ
26 ಧೀಶ್ವರಂಯಾದವಕುಳಾಂಬರದ್ಯುಮಣಿಸರ್ವ್ವಜ್ಞಚೂಡಾಮಣಿಮಲೆರಾಜರಾಜ
27 ಮಲಪರೊಳುಗಂಡಕದನಪ್ರಚಂಡನೇಕಾಂಗವೀರನಸಹಾಯಶೂರಶನಿವಾರಸಿ
28 ದ್ಧಿಗಿರಿದುರ್ಗ್ಗಮಲ್ಲಚಲದಂಕರಾಮಮಗರರಾಜ್ಯನಿರ್ಮ್ಮೂಳನಚೋಳರಾಜ್ಯಪ್ರತಿಷ್ಠಾ
29 ಚಾರಿಯರುಮಪ್ಪಭುಜಬಳಪ್ರತಾಪಚಕ್ರವರ್ತ್ತಿಹೊಯಿಸಣಶ್ರೀವೀರನಾರ
30 ಸಿಹ್ವದೇವರುದೋರಸಮುದ್ರದನೆಲೆವೀಡಿನೊಳುಸುಖಸಂಕಥಾವಿನೋದದಿಂರಾ

---

* ಆರಂಭದಲ್ಲಿ ೨ ಪಙ್ತಿಗಳು ಧನುರಾಕಾರವಾಗಿವೆ.

31 ಜ್ಯಂಗೆಯ್ಯುತ್ತಮಿರೆ || ಶ್ರೀಮದ್ರಾಮಸುತಸ್ತುತಸ್ಯಜನನೀಬೊಪ್ಪವ್ವನಾಮಾತ
32 ತ್ರಃಖ್ಯಾತೋಮಾಖ್ಯಸತೀತಿಭಾನುರಭವದ್ವಾಶಿಷ್ಠವಂಶೋದ್ಭವಃಭ್ರಾತಾವೈ
33 ಶಿವದೇವನಾಮಸುಕೃತೀತದುಬೊಪ್ಪದೇವಸ್ಸುಧೀಶ್ರೀಲಕ್ಷ್ಮೀನರಸಿಹ್ವ
34 ಸರ್ವ್ವಜನತಸ್ಯಾಹೋಪ್ರತಿಷ್ಠಾಕೃತಾ || ಮಾರ್ಗ್ಗೋತ್ತುಂಗತಟಪ್ರಮಾಣಗ
35 ಣನಪ್ರಜ್ಞಾಜಲಪ್ರತ್ಯಹಸ್ಸತ್ತರ್ಕ್ಕಪ್ರತರಂಗಶುಕ್ತಿವಿನಯಾಚಾರ್ಯೈಶ್ಚರತುನೈರ್ಯ್ಯು
36 ತಂಶ್ರೀಬಲ್ಲಾಳಪುರಂಹಿಕೀರ್ತ್ತಿಜಲಧಿಂವಿದ್ಯಾವಿನೋದಾದಿಕಂಕಃಕಃಕಿಂನ
37 ಕರೋತಿವಂದನಮಹೋಸದ್ಭಿಸ್ಸದಾಸೇವಿತಂ || ಶ್ರೀಬಲ್ಲಾಳಪುರಸ್ಥಿತಾಸ್ಸು
38 ರತರುಖ್ಯಾತಾಸ್ಸುಸೀಲೋದ್ಭವಾಸ್ಸರ್ವ್ವೈಸ್ಸರ್ವ್ವನಮಸ್ಯಕೀರ್ತ್ತಿಜಲಧಿಸ್ಥಾ
39 ನಪ್ರವಿಷ್ಟಂತದಾತಸ್ಮಿನ್ಮಾಣಿಕಸೆಟ್ಟಿಮೇವಮುದದಂಲಕ್ಷ್ಮೀನೃಸಿಂ
40 ಹಾಯತೇರಂಗಾಂಗಾರ್ಚ್ಚನಭೋಗಭೋಗಬಹುಳಂಭಕ್ತ್ಯಾಸು
41 ಧೀರೋತ್ತಮಾಃ | ಯೇಕಮತ್ಯಮಣಿಸ್ಥಾನಕೀರ್ತ್ತಿರತುನಾಕರಸ್ತತಃಶ್ರೀಬ
42 ಲ್ಲಾಳಪ್ರದತ್ತತ್ವಾದ್ಬಲ್ಲಾಳಪುರಮುಚ್ಯತೇ || ವಿತರತುಸುಖಮಸ್ಯಪ್ರೀ
43 ತಿಮೇವಂಕರೋತುಪ್ರಭುರಿಹಪರರೂಪಃಪಾತುವಸ್ಸುಪ್ರಸನ್ನಃ
44 ಜನಜನಿತಜಡತ್ವಂಯಾತುಯಾತುಪ್ರಭೂತಂದಿಶತುದಿಶತುಲೋ
45 ಕೇವಾಂಛಿತಾರ್ತ್ಥಂಸುರೇಶಃ || ಶ್ರೀಲಕ್ಷ್ಮೀನರಸಿಹ್ವಸ್ಯಶಾಸನಂಸ್ಥಿರಶಾ
46 ಸನಂಶಿವದೇವೇನಲೋಕಸ್ಯಮಂಗಳಾಯಪ್ರತಿಷ್ಠಿತಂ || ಸತ್ಯಂಭೂತ
47 ಹಿತಂಗುರುದ್ವಿಜಸುರಶ್ರೀಪಾದಸೇವಾದಯಾದಾಕ್ಷಿಣ್ಯಂಪಿತ್ರುಮಾ
48 ತೃಭಕ್ತಿವಿನಯಶ್ರೀಯಾಂಸ್ಯಹೋಭೂತಳೇತೇಷಾಮಪ್ಯಧಿಕಂಹಿದು
49 ರ್ಲ್ಲಭತರಂಧರ್ಮ್ಮಂತತಶ್ಚಾಧಿಕಂತದ್ಧರ್ಮ್ಮಪ್ರತಿಪಾಲನಂನೃಪತಯೋ
50 ರಕ್ಷಂತುಮತ್ವಾಸದಾ || ಧರ್ಮ್ಮಸಂರಕ್ಷಕೋರಾಜಾಕಲ್ಪಸ್ಥಾಯೀಸಮೋ
51 ಧತ್ರೇಧರ್ಮ್ಮನಾಶಕರಸ್ವಸ್ಯಕುಲನಾಶಕರಃಕರೀ || ಸ್ವಸ್ತಿಶ್ರೀಮ
52 ತುಸಕವರ್ಷದ ೧೨೮೬ ನೆಯತಾರಣಸಂವತ್ಸರದ
53 ಚೈತ್ರಶುದ್ಧ ೧೦ ಸೋಮ | ಶ್ರೀಮತುಕಿತ್ತನಕೆಱೆಯಗ್ರಾ
54 ಮಮಧ್ಯದಲ್ಲಿಶ್ರೀಲಕ್ಷ್ಮಿನರಸಿಹ್ವದೇವರಪ್ರತಿಷ್ಠಾಕಾಲದಲು
55 ಕಿತ್ತನಕೆಱೆಯನೂಱಿಪ್ಪತ್ತುಮಹಾಜನಂಗಳುಂಮವರಪ್ರಿಯ
56 ಪುತ್ರಬೋಳೆಯನಾಯಕಮಾರೆಯನಾಯಕಂಗಳುಸಹಿತ
57 ವಾಗಿತಮ್ಮಹಳ್ಳಿಮಾಣಿಕಗಟ್ಟನುನಾಲ್ಕುಸೀಮೆಪರಿಯನ್ತವಾಗಿಕೇ
58 ದಗೆಗಟ್ಟದಹಳುಗಿನಬಡಗಣತೋಟಸ್ಥಳಸಹಿತವಾಗಿಯೂಶ್ರೀಲಕ್ಷ್ಮೀ
59 ನ್ರಿಸಿಹ್ವದೇವರಿಗೆಯಂಗಭೋಗರಂಗಭೋಗಜೀರ್ನ್ನೋದ್ಧಾರಚೈತ್ರಪೈತ್ರ
60 ವಂಮಾಡುವಂತಾಗಿಪ್ರತಿಷ್ಠಾಕಾಲದಲುಸರ್ವ್ವನಮಸ್ಯವಾಗಿಯೂ
61 ಯಾಚಂದ್ರಾರ್ಕ್ಕಸ್ಥಾಯಿಯಾಗಿಧಾರಾಪೂರ್ವ್ವಕವಾಗಿಕೊಟ್ಟರು ||
62 ಸಾಮಾನ್ಯೋಯಂಧರ್ಮ್ಮಸೇತುಂನ್ರಿಪಾಣಾಂಕಾಲೇಕಾಲೇಪಾ
63 ಲನೀಯೋಭವದ್ಭಿಃ | ಸರ್ವ್ವಾನೇತಾನ್ಭಾವಿನಃಪಾರ್ತ್ಥಿವೇಂದ್ರಾನ್ಭೂ
64 ಯೋಭೂಯೋಯಾಚತೇರಾಮಚಂದ್ರ | ಸ್ವದತ್ತಂಪರದತ್ತಂ
65 ವಾಯೋಹರೇತಿವಸುಂಧರಾ | ಷಷ್ಠಿರ್ವರ್ಷಸಹಸ್ರಾಣಿವಿಷ್ಠಾಯಾಂಜಾಯ
66 ತೇಕ್ರಿಮಿ || ದಯೆಯಿಂಧರ್ಮ್ಮಮನೊಲುದುಕಾವಮನುಜರ್ಗ್ಗಯುಂಜ
67 ಯಶ್ರೀಯುಮಕ್ಕುಮಿವಂಕಾಯದೆಕಾಯ್ದುಪಾಪಿಗೆಕುರುಕ್ಷೇತ್ರಂ

68 ಗಳೊಳುವಾರಣಾಶಿಯೊಳೆಕ್ಕೋಟಿಮುನೀಂದ್ರರಂಕಪಿಲೆಯುಂವೇ
69 ದಾಢ್ಯರಂಕೊಂದದೊಂದುಮಹಾದುರ್ಯ್ಯಶಮಕ್ಕುಮೆಂಬುದುವಲಂ
70 ಶೈಳಾಕ್ಷರಬ್ರಾತಗಳು || ಬಾಚಣ್ಣಂಗಳುಬರದರು ||

69

ಅದೇ ಹೋಬಳಿ ಹಿರೀಕಲ್ಲುಬೆಟ್ಟದ ಮೇಲಿನ ನಾಗಪುರಿಯ ಶಂಕರೇಶ್ವರ ದೇವಸ್ಥಾನದ ಬಳಿ ನೆಟ್ಟಿರುವ ಕಲ್ಲು.

ಪ್ರಮಾಣ 5′ 6″ × 2′.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇ || ತ್ರೈಳೋಕ್ಯನಗರಾರಂಭ
2 ಮೂಳಸ್ತಂಭಾಯಶಂಭವೇ || . . . .
3 ಸ್ವಸ್ತಿಹೊಯ್ಸಳವಂಸಾಯಯದುಮೂಳಾಯಯದುಭವಃಕ್ಷತ್ರಮೌಕ್ತಿಕಸಂತಾನಂಪ್ರಿಥ್ವೀ
4 ನಾಯಕಮಂಡನಂ || ಮೊದಲೊಳುಹೊಯ್ಸಳರಾಜ್ಯಲಕ್ಷ್ಮಿಯೊದವಂತೋಳುವಲು
5 ಪಿನಿಂತಾಳ್ದಿತಂನುದಯಂರಂಜಿಸೆತಂನಬಲುಪೊದವೆತಂನಾರ್ಪ್ಪೇಱಿತಂನಾಜ್ಞೆಮೀಱಿ
6 ದಿಶಾಚಕ್ರಮನೊತ್ತಿಕೊಂಡುತಳಕಾಡಂಗಂಗರಾಜ್ಯಕ್ಕೆತಾಂಮೊದಲಾದಂಯದುವ
7 ಂಶವರ್ದ್ಧನಕರಂಶ್ರೀವಿಷ್ಣುಭೂಪಾಳಕಂ || ಧುರದೊಳುಬಂದೊಡ್ಡಿವೈರಿಪ್ರಕರಮಿರಲವ
8 ಷ್ಟಂಭದಿಂಬಿಟ್ಟದೇವಂಕರವಾಳಂತೋಡಿಕೊಂಡಿಂಬಳಿಕೆಲೆಲೆಮಹಾದೇವಕಾಳಾಗ್ನಿ
9 ರುದ್ರಂಗುರಿಗಣ್ಬಂದಂತೆಮಾಕಾಳಿಗೆಗರುವಡೆದಿರ್ದಂತಿಂದ್ರದಿಗುದಂತಿಸೊಕ್ಕಿಂಪರಿಪು
10 ಂಗೊಂಡಂತಗುರ್ಬ್ಬಿಂಪರ್ಬ್ಬಿಪುದೆನೆಮುಳ್ಸಿಂಮೀಱಿಮಾಱಾಂಪನಾವಂ || ಎತ್ತದೆಮುಂನವೆತ್ತಿನಡೆ
11 ಗೊಳ್ಳದಮುಂನವಡುರ್ತ್ತುಕೋಪದಿಂಮುತ್ತದಮುಂನವರ್ತ್ಥಮನೆತೆತ್ತಿರಿವಿತ್ತಿರಿವಾತ್ಮ
12 ದುರ್ಗ್ಗವಂಮತ್ತೆನವೇಡನಿರ್ಗ್ಗಮಮಿದೆಂದುವಿರೋಧಿಗೆವೀರಲಕ್ಷ್ಮಿಸಾಱುತ್ತಿರೆವಿಷ್ಣುವಿಕ್ರ
13 ಮದುಪಕ್ರಮವಾಕ್ರಮಿಸಿತ್ತುಲೋಕಮಂ || ಲಕ್ಷ್ಮಾದೇವಿಖಗಾಧಿಪಲಕ್ಷ್ಮಂಗೆಸೆದಿ
14 ರ್ದ್ದವಿಷ್ಣುಗೆಸೆವಂತೆವಲಂಲಕ್ಷ್ಮಾದೇವಿಲಸನುಮ್ರಿಗಲಕ್ಷ್ಮಾನನೆವಿಷ್ಣುಗಗ್ರಸತಿಯೆ
15 ನೆನೆಗಳ್ದಳು || ಅವರ್ಗ್ಗೆಮನೋಜನಂತೆಸುದತೀಜನಚಿತ್ತಮನಿಳುಕೊಳಲುಕೆಸಾ
16 ಲುವವೆಯುವಶೋಭೆಯಿಂದತನುವೆಂಬಭಿಧಾನಮನಾನದಂಗನಾನಿವಹಮನೆಚ್ಚು
17 ಮುಯ್ವನಣಮಾನದೆವೀರರನೆಚ್ಚುಯುದ್ಧದೊಳುತವಿಸುವನಾದನಾತ್ಮಭವನಪ್ರತಿಮಂನರ
18 ಸಿಂಹಭೂಭುಜಂ || ಪಡೆಮಾತೇಂಬಂದುಕಂಡಂಗಮ್ರಿತಜಳಧಿತಾಂಗರ್ವ್ವದಿಂ
19 ಗಂಡವಾತ್ತಂನುಡಿವಂನಂಗೇನನೆಂಬೈಪ್ರಳಯಸಮಯದೊಳುಮೇರೆಯುಂಮೀಱಿಬರ್ಪ್ಪಕಡ
20 ಲಂನಂಕಾಳನಂನಂಮುಳಿದಕುಳಿಕನಂನಂಯುಗಾಂತಾಗ್ನಿಯುಂನಂಸಿಡಿಲಂನಂಸಿಂಗ
21 ದಂನಂಪುರಹರನುರಿಗಣ್ಣಂನನೀನಾರಸಿಂಹಂ || ಪಟ್ಟದಸತಿಯೇಚಲೆಗಂನೆಟ್ಟನೆನರಸಿಂ
22 ಹನೃಪವರಂಗಂಮುದದಿಂಪುಟ್ಟಿದಬಲ್ಲುನೃಪಾಳಕನೊಟ್ಟಜಿಗಲಿಯೆನಿಪವೀರ
23 ವಿಕ್ರಮತೇಜಂ || ಕುಲಕೆಕಳಂಕವಿಲ್ಲದವಿಸುದ್ಧಚರಿತ್ರದಕಳ್ಪಭೂಜಮಂತೊಲತೊ
24 ಲಗೆಂದುದಾನಗುಣವಾಂತರನುಗ್ರಭುಜಾಸಿಧಾರೆಯಿಂಜಲಕನೆಮಾಡಿಸ
25 ಗ್ಗಮನೆಮುಟ್ಟಿಸುವರ್ಜ್ಜನಸಚ್ಚರಿತ್ರವಗ್ಗಲ್ಸಿದುದೆಂದುಬಣ್ಣಿಪುದುಬಲ್ಲುನೃಪಾಳನನೀ
26 ಜಗಜ್ಜನಂ || ಘನಶೌರ್ಯ್ಯಂಬಲ್ಲುಭೂಪಂನಿಜವಿಜಯಹಯಾರೂಢ
27 ನಾಗಲುಕಳಿಂಗಂವನವಾಶೋದ್ಯುಕ್ತನಾದಂತುಳುವನಳವಿಗೆದ್ದೋಡಿದಂಕೊಂಕಣಂ
28 ಭೋಂಕೆನೆಪುಂಣ್ಯಾರಂಣ್ಯಮಂಸಂವರಿಸಿದನಗಿದಂಗೂರ್ಜ್ಜರಂಮಾಳವಂವಿಂಧ್ಯ

29 ನಿಕುಂಜಪ್ರಾಪ್ತನಾದಂಜಳಧಿನಿಕಟಮಂಚೋಳಿಕಂವೀಳೆಗೊಂಡಂ || ಸ್ವಸ್ತಿಸಮಧಿ
30 ಗತಪಂಚಮಹಾಸಬುದಮಹಾಮಂಡಳೇಶ್ವರಂದ್ವಾರಾವತೀಪುರವರಾಧೀಶ್ವರಂತು
31 ಳುವಬಳಜಳಧಿಬಡವಾನಳಂದಾಯಾದದಾವಾನಳಂಪಾಂಡ್ಯಕುಳಕಮಳವನವೇದಂ
32 ಡಗಂಡಭೇರುಂಡಮಂಡಳಿಕಬೇಂಟೆಕಾಱಪರಮಂಡಳಸೂಱೆಕಾಱಸಂಗ್ರಾಮಧೀರಕ
33 ಲಿಕಾಲಕಾಮವಾಸಂತಿಕಾದೇವೀಲಬುಧವರಪ್ರಸಾದಮೃಗಮದಾಮೋದನಾಮಾದಿಪ್ರಸಸ್ತಿ
34 ಸಹಿತಂಶ್ರೀಮನುಮಹಾಮಂಡಳೇಸ್ವರಂತಳಕಾಡುಕೊಂಗುನಂಗಲಿಗಂಗವಾಡಿನೊ
35 ಳಂಬವಾಡಿಉಚ್ಚಂಗಿಬನವಸೆಹಾನುಂಗಲುಗೊಂಡಭುಜಬಳವೀರಗಂಗನಸಹಾಯಸೂ
36 ರನಿಸ್ಸಂಕಪ್ರತಾಪಹೊಯ್ಸಳವೀರಬಲ್ಲಾಳದೇವರುಸಕಳಮಹೀಮಂಡಳಮಂದುಷ್ಟ
37 ನಿಗ್ರಹಸಿಷ್ಟಪ್ರತಿಪಾಳನಂಗೆಯ್ದುರಕ್ಷಿಸುತ್ತುಂದೋರಸಮುದ್ರದನೆಲೆವೀಡಿನೊ
38 ಳುಸುಖಸಂಕಥಾವಿನೋದದಿಂರಾಜ್ಯಂಗೆಯ್ವುತ್ತಮಿರಲುತತ್ಪಾದಪದ್ಮೋಪಜೀ
39 ವಿಗಳಪ್ಪಅರಸಿಯಕೆಱೆಯರಾಜಾಧ್ಯಕ್ಷದಹೆಗ್ಗಡೆಗಳಸತುಕೀರ್ತ್ತಿಯೆಂ
40 ತೆಂದಡೆ || ಕುಲಮಂಪೇಳ್ವಡೆವಾಜಿವಂಸತಿಳಕಂಸನುಮಂತ್ರಮಂತ್ರಿತ್ವದೊಳು
41 ಹಲರುಂಜೀಯೆನೆದೇವಮಂತ್ರಿಯೊದ್ವಂಸಲ್ಲೀಲೆಯಿಂತೋಱುವಂಚಲದಿಂದಾಂತರ
42 ನಿಕ್ಕಿಮೆಟ್ಟಿಪಡೆವಂಸತುಕೀರ್ತ್ತಿಯಂಧಾತ್ರಿಯೊಳುನಲವಿಂರೇಚಣಮಂತ್ರಿಯಾರ್ಗ್ಗವಧಿಕಂ
43 ಸಾಹಿತ್ತ್ಯವಿದ್ಯಾಧರಂ || ಪುರುಷನಿಧಾನನೆಂದುಪುರುಶಾರ್ತ್ಥಪುರೂರವನೆಂದುಸ
44 ತುಕವೀಶ್ವರಜನವಂದ್ಯನೆಂದುಧರೆಬಂಣಿಸುತಿರ್ಪ್ಪುದುಕೇತಮಲ್ಲನಂಪರಹಿತಖೇಚರಾ
45 ಧಿಪನನೀಕಲಿಕಾಲದಕಳ್ಪಭೂಜನಂವರಗುಣಿಮಂತ್ರಿಮಾನವಸಿಖಾಮಣಿಯುಂಜ
46 ಸದರ್ತ್ಥಿಗಂಡನಂ || ಸುರಕುಜಮುಂಸುರಧೇನುವನೆರೆವಚ್ಚಿಗನೇಕೆವಂದಿನಿರುತಂಬೇಡೀವರಗು
47 ಣಿಮುತ್ತನಮಾರನಪರಹಿತಮುಂಮಾಳ್ಪದಾನಚಿಂತಾಮಣಿಯಂ || ಮತ್ತಂಶ್ರೀಮನು
48 ಮಹಾಪ್ರಧಾನಂಮಹಾಪಸಾಯಿತಂವೀರಬಲ್ಲಾಳದೇವನಪಾದಾರಾಧಕನುಂಸಿವಪಾದ
49 ಸೇಖರನುಮಪ್ಪಚೆಮ್ಮಾವುಗೆಯಮಹಾದೇವನಕೀರ್ತ್ತಿಯೆಂತೆಂದಡೆ || ಈವರದೇವನಿತ್ತುಮೆಱೆವೀರ
ವಿಸೂ
50 ನುವಿವೇಕದಾಗರಂಭಾವಕನುದ್ಘಚಾರುಚರಿತಂಭುವನಾಗ್ರಣಿರಾಜಪೂಜಿ
51 ತಂದೇವರದೇವಸಂಕರನಪಾದಯುಗಕ್ಕೆನಿಬದ್ಧಚಿತ್ತನೆಂದಾಗಳುವೊಲುದುಬಂಣಿಪುದುಮೇ
52 ದಿನಿಮಾಧವನಂನಿರಂತರಂ || ಜನನಿನೆಗಳ್ದಮಾರವೆಜನಾಗ್ರಣಿಸದುಗುಣಿಕಾವಿಸೆಟ್ಟಿಯೊ
53 ಳ್ಪಿನಜನಕಂತ್ರಿಳೋಚನಮಹಾಮಹಿಮಂತನಗಿರ್ದ್ದದೆಯ್ವಭೂವಿನುತನನೂನದಾನಿಕ
54 ಲಿಬಲ್ಲುನ್ರಿಪಾಳಕನಾಳ್ದನೆಂದೊಡಿಂನನುಪಮಮಾಧವಂಗೆಪಡಿಯಾರ್ಗ್ಗಳಮಾನವರೀಧರಿತ್ರಿಯೊ
55 ಳು || ಶ್ರೀಮದರಸಿಯಕೆಱೆಯಹೆಗ್ಗಡೆಗಳುಂಸಮಸ್ತಪ್ರಜೆಗಾವುಂಡುಗಳುಮಿರ್ದ್ದು
56 ಅಱೆಯಸಂಕರದೇವರನೈವೇದ್ಯನಂದಾದೀವಿಗೆಯಂಗಭೋಗರಂಗಭೋಗಖಂಡಸ್ಫುಟಿತಜೀರ್ನ್ನೋ
57 ದ್ಧಾರಕ್ಕವಾಗಿಸಕವರ್ಶ ೧೦೯೫ನೆಯವಿಜಯಸಂವತ್ಸರದಫಾಲ್ಗುಣಸುದ್ಧತ್ರ
58 ಯೋದಸಿವಡ್ಡವಾರಉತ್ತರಾಯಣಸಂಕ್ರಮಾಣಬ್ಯತೀಪಾತದಂದುನಾಗರಾಸಿಪಂಡಿ
59 ತರಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿಟ್ಟದತ್ತಿಅಗ್ಗುಳಿಯಕೆಱೆಯಕೆಳಗೆಗದ್ದೆಸಗ
60 ಬೆದ್ದಲೆಕಂವು ೧೦೦ಮತ್ತಂನಾಗವೇದಿಯಲುಚಮ್ಮಾವುಗೆಯಮಹದೇವನುಂಬಂಮ್ಮಗಾವು
61 ಂಡನುಂಸಮಸ್ತಪ್ರಜೆಗಳುಮಿರ್ದ್ದುಬಿಟ್ಟದತ್ತಿಹಿರಿಯಕೆಱೆಯಕೆಳಗೆಗದ್ದೆಸಗಕೊ೧ಂಬೆದ್ದ
62 ಲೆಕೊ೧ಂಬಮ್ಮೆಯನಹಳ್ಳಿಯಸೋವಗಾವುಂಡಕೊಟ್ಟದತ್ತಿಹೊಲೆಗಟ್ಟದಕೆಳಗೆಗದ್ದೆಸಗಬೆ
63 ದ್ದಲೆಕೊ೧ಂಅಗ್ಗುಂದದಸಮಸ್ತಪ್ರಜೆಗಾವುಂಡುಗಳುಮಿರ್ದ್ದುಬಿಟ್ಟದತ್ತಿಊರಮುಂದಣಹಳು
64 ಗಿನಗದ್ದೆಸಗಬೆದ್ದಲೆಕೊ೧ಂಗಿಜೆಯಹಳ್ಳಿಯಮಾಚಗವುಂಡಬಿಟ್ಟದತ್ತಿಗದ್ದೆಕೊ೧ಂಬೆಕೊಱ

65 ಕಾಡುವಿಟ್ಟಯಕೆಱೆಯಬೀರಗವುಂಡಕೊಟ್ಟಗಕೊ೧೦ಸಮಸ್ತನಖರಂಗಳುಕೊಟ್ಟಸೆಡೆ
66 ಯಕ್ಕಿಹಗರಿಟ್ಟಗೆಯನಾಗೇಶ್ವರದೇವರಕುಂದಜೀಯನಪುತ್ರಪದ್ಮಸಿವಪಂಡಿತರಸಿಸ್ಯಕಾಳಾ
67 ಮುಖಪ್ರತಿಬದ್ಧನಾಗರಾಸಿಯಸಿಸ್ಯಮಾದಜೀಯಹಂನೆರಡುಕೈಯಮನೆಗೆತೆಱೆಮಾನ್ಯ ಇಂ
68 ತೀಧರ್ಮ್ಮಮಂಪ್ರತಿಪಾಳ್ಸಿದವರುಗಂಗೆವಾರಣಾಸಿಕುರುಕ್ಷೇತ್ರದೊಳುಸಹಸ್ರಕವಿಲೆಯಂಕೋ
69 ಡುಂಕೊಳಗುಮಂಹೊಂನಲುಕಟ್ಟಿಸಿಸಹಸ್ರಬ್ರಾಹ್ಮಣರಿಗೆಕೊಟ್ಟಫಲಮಕ್ಕು ಇಂತೀಧರ್ಮ್ಮಮಂಕೆಡಿಸಿದ
70 . . . . ಸಸಹ್ರಬ್ರಾಹ್ಮಣರುಮನಳಿದನರಕಕ್ಕಿಳಿವರು || . . . . . . ತಲಿಸದೆ . . .
71 . . . .

ಬಲಭಾಗದಲ್ಲಿ

. . . .
74 ಕುರುವಂಕದಸಮಸ್ತ
75 ಪ್ರಜೆಗಾಉಂಡುಗಳು .
76 . ಟ್ಟುಬಿಟ್ಟದತ್ತಿಗಸ೧ಬೆದ್ದಲೆ
77 ಸಱ . . ಡಬಾಗಲ
78 ಮಹಾಜನಂಗಳುಬಿಟ್ಟ
79 ದತ್ತಿಗದ್ದೆಸ೧ಬೆದ್ದಲೆಸ
80 ೧ಮರಗಟಗೆಱೆಯ
81 ಸಮಸ್ತಪ್ರಜೆಗಾವುಂ
82 ಡುಗಳುಬಿಟ್ಟದತ್ತಿಗ
83 ದ್ದೆಸ೧ಬೆದ್ದಲೆಸ೧
84 ಹಲುಕೂರಸ
85 ಮಸ್ತಪ್ರಜೆಗಾವುಂ
86 ಡುಗಳುಬಿಟ್ಟದತ್ತಿಗ
87 ದ್ದೆಸ೧ಬೆದ್ದಲೆಸ೧
88 ಕಲಗವುಡಿಯ
89 ಪ್ರಜೆಗಾವುಂಡುಗಳು
90 ಬಿಟ್ಟದತ್ತಿಗದ್ದೆಸ೧ಬೆದ್ದ
91 ಲೆಸ೧ಬಗವತಿಗಟ್ಟ
92 ದಪ್ರಜೆಗಾವುಂಡು
93 ಗಳುಬಿಟ್ಟದತ್ತಿಗದ್ದೆಸ
94 ೧ಬೆದ್ದಲೆಸ೧
95 . . ರಗೆಱೆಯಮ
96 ಹಾಜನಂಗಳುಬಿಟ್ಟದ
97 ತ್ತಿಗದ್ದೆಸ೧ಬೆದ್ದಲೆಕೊ
98 ೧೦ತಳಿರೂರಮಹಾ
99 ಜನಂಗಳುಬಿಟ್ಟದತ್ತಿ
100 ಗದ್ದೆಸ೧ಬೆದ್ದಲೆಸ
101 ೧ಹಾರುವರಹ
102 ಳಿಯಪ್ರಜೆಗಳುಬಿ
103 ಟ್ಟದತ್ತಿಗದ್ದೆಸ೧ಬೆದ್ದ
104 ಲೆಸ೧ಎಳವರೆಯ
105 ಪ್ರಜೆಗಾವುಂಡುಗ
106 ಳುಬಿಟ್ಟದತ್ತಿಗದ್ದೆಸ
107 ೧ಬೆದ್ದಲೆಸ೧
108 ಜಂನವೂರದಮ
109 ಲ್ಲಿಸೆಟ್ಟಿಯಮಗತ್ಯಂ
110 ಮಸೆಟ್ಟಿಬಿಟ್ಟದತ್ತಿ
111 ಗದ್ದೆಕೊಳಗ೧೦ಬೆ
112 ದ್ದಲೆಕೊಳ೧ ||

. . . . . .
115 ಯಹೆಗ್ಗಡೆಬೂ
116 ವಯ್ಯನಮಾಚ
117 ಯ್ಯಆಕೊಳಯೊ
118 ಳಗೆಬಿಟ್ಟದತ್ತಿಬೆದ್ದಲೆ
119 ಕೊಳಗ । ೧ ||

ಎಡಭಾಗದಲ್ಲಿ

120 . . . .
121 ಬಲ್ಲಯ್ಯ . . . .

. . . .
125 . . ಯ್ಯಗ೧ಱ
126 ಗಂಗಾಧರ
127 ದೇವಪ . ೬ .
128 ಹೆಗ್ಗಡೆ . . .
129 . . ಯ್ಯಗ೧
130 ವಿಜಯ
131 . . ವಗ೧
132 ಸೇನಬೋವನಾ
133 ಗಯ್ಯ . . .

134 ಗಂ . . ಗಾದೇ
135 ವಿಗ೧
136 ಬೀವ . . ಗ .
137 ಮಹಾ . . .
138 ಮಾ . . ಸ .
139 ಮಗ . . .
140 ಅರಸಿಯಕೆ
141 ಱೆಯಬಾಸಗ
142 ವುಡಗ೧೫
143 ಅಳಗಜೀಯ
144 ಬೊಪ್ಪಜೀಯ
145 ಗ೧೫ಸಲ್ಲ . .
146 ತುಂಬಿನಕೆಱೆಯ
147 ಕಣ್ಣಗ ೧೫ . .

70

ಅರಸಿಕೆರೆಯ ಶಿವದೇವಸ್ಥಾನದ ಪಕ್ಕದಲ್ಲಿ ಇರುವದು.

ಪ್ರಮಾಣ 4′ 10″×1′ 4″.

1 ನಮಸ್ತುಂಗಶಿರಶ್ಚುಂಬಿಚಂದ್ರಚಾಮರಚಾರವೇತ್ರೈಲೋಕ್ಯನಗರಾರಂ
2 ಭಮೂಲಸ್ತಂಭಾಯಶಂಭವೇ || ಸ್ವಸ್ತಿಸಮಸ್ತವಸ್ತು . . ವಸ್ಥಾನಮುಂ
3 ಲಕ್ಷ್ಮೀನಿಳಯಮುಮುಂ . . ವ . . . ಮುನಿತ್ಯಮುಮೆನಿಸಿಸಮು
4 ದ್ರದನ್ತಿರ್ದ್ದಹೊಯ್ಸಳಾನ್ವಯದೊಳುದಯಿಸಿದವಿಷ್ಣುನೃಪತನೂ
5 ಜಂನೃಸಿಂಹನರಪನಾಮಗಂಬಲ್ಲಾಳನೃಪನಾತನಸುತಂನರಸಿಂಹಭೂಪಂರಾಜ್ಯಂ
6 ಗೆಯ್ವುತ್ತಿರೆತದೀಯಪಾದಪದ್ಮೋಪಜೀವಿಗಳಪ್ಪಶ್ರೀಮದರಸಿಯಕೆಱೆಯ
7 ಭಕ್ತಜನಂಗಳುಶ್ರೀಮತ್ಕತ್ತಮೇಶ್ವರದೇವರನಂದಾದೀವಿಗೆಗಳ್ಚಂದ್ರಾರ್ಗ್ಗತಾ
8 ರಂಬರಂಬಡ್ಡಿಯಿನಡೆವನ್ತುಬಲೇಶ್ವರಕಂನಡವನ್ತಾಗಿ . . . . ಕವಕ್ಷಯ
9 ಭಂಡಾರವಾಗಿಸಕಲಭಕ್ತಜನಂಗಳಾ . . ಯಿಂಸಕವರ್ಷ ೧೧೪೨ಸ
10 ಲೆವಿಕ್ರವಸಂವತ್ಸರದಕಾರ್ತ್ತಿಕಸು೧ . . ಟ್ಟದತ್ತಿಕುಳಹೆಗ್ಗಡೆಬಿಕ್ಕಣ್ಣಂಗ
11 ಳುಕೊಟಗ೨ನಾಚೆಯ್ಯಪ . . . . . . ಹಿಸೆಟ . ಗ೧
12 ಮುದ್ದಗೌಡನಮಗಸಾಯಣ . . ದ್ಯಾಣ೧ಮಲ್ಲಯ್ಯನಮ
13 ಗಹಲಯ್ಯಗ೧ . . . . ಟ್ಟಗ೧ಜೇಗಟಿ೧ಏಕ
14 ಲಸೆಟ್ಟಿಗ೧ಸಿಂಗಿಸೆಟ್ಟಿಯಮಾ . . . . . ಯ್ಯಗ೧ಬವಗೌ
15 ಡರಮಾಲೆಯಚಟಯ . . . . ಕಾ . ಕಾಳಿಸೆಟಿಯ
16 ಮಳೆಯಗ೧ಬೆ . ಯ . . . . ಗ೧ಮಲ್ಲರಸ
17 ರಮಗಪೆರುಮಾಳೆ . . . . ಡಿಯಮಗಬೆಮಿಸೆ
18 ಟಿಗ೧ಮಣಿಗಾ . . . . ಸೋವಿಸೆಟ್ಟಿ
19 ಗೆ೧ಹಿಡುಗೆಯಹರಿಯ . . . . ಗ೧ರಾಜವೂ
20 ರಭೂ . ಗ . . . . ಕಲ್ಲೆಯಗ೧
21 ನಾಕಿಗೌಡನಬಮ್ಮೆಯಗ೧ . . . . ಪ೫ಸಾತೆಯ
22 ಮಂನೆಯ . . . . ಗವುಡಗ೧
23 ಸಾತ್ಯೆಯನಮಗ . . . . . . ಸೋಮೇಶ್ವರಭಟ್ಟರ
24 ಮದುಕ . . . . ಗಳ . . . . . ಸೆಟ್ಟಿಯ . .

(ಮುಂದೆ ೧೮ ಪಙ್ಕ್ತಿಗಳು ಸವೆದು ಹೋಗಿವೆ)

[43] . ಗಾಣದಲುತಂಮದೀಕ್ಷಾ . . ಗ್ರತಂದೆಲುಬಡ್ಡಿಯಿಂ
[44] . ತೆರುದಾಗಿತಾವುಕೊಟ್ಟಗ೧ತ್ರಿಳೋಚನಸೆಟ್ಟಿ . .
[45] ಬೋವನನಾಗಯ್ಯ . . . .

ಎಡಪಾರ್ಶ್ವದಲ್ಲಿ.
[46] ದೇವಗಣಹೆಗ್ಗಡೆಗದ್ಯಾ೧ಮಾ
[47] ಚಯ್ಯಪ೫ಕಾಳೆಯನಬಂ
[48] ಮ್ಮೆಯಪ೫ಪೂಮನಮಸಣ
[49] ಯುಗ೧ಪರಿವಾಣಗ೧ಮಾ
[50] ಳೆಯನಕಂಕಯಪ೫ತೊ
[51] ಳಚೆಯಬಂಮ್ಮೆಯಪ೫ಗೂಳೆ
[52] ಯಕೇತಗವುಡಪ೫ಜಕ್ಕಗೌ
[53] ಡರಬಮ್ಮಗೌಡನಮಾರಗೌಡ
[54] ಗ೧ಅಳಗಜ್ಜಿಯಮಾರೆಯ
[55] ನಬಪ್ಪಯಗ೧ಮಾಕಣ
[56] ನಬಸವೆಯಪ೫ಬರಮ
[57] ಗವುಡರಕಲ್ಲಯದೂಪಕ್ಕೆ
[58] ಗ೧ತುಂಬಿನಕೇಜಿಯಮಾರಗ
[59] ವುಡನಮಗಚಿಕ್ಕಣಪ೫ತಮಡಿಮಾ
[60] ರಿಸೆಟ್ಟಿಯ . . . ಆಬಂಮೆಯ
[61] ಪ೫

71

ಅರಸಿಕೆರೆಯ ಬಸ್ತಿಗೆ ಪಶ್ಚಿಮಕ್ಕೆ ಬಿದ್ದಿರುವದು.

ಪ್ರಮಾಣ 7′ 6″ × 2′ 7″.

[1] ಶ್ರೀಮತ್ಕೇಶವಾಯನಮಃ || ಶ್ರೀಪಾದಾಂಬುಜಯುಗ್ಮಮತ್ಯಮಲಗಂಗಾಸೂತಿಕಾಗೇಹ
[2] ಮಾಯ್ತ್ತಾಪಂಕೇರುಹಪೀಠನುದ್ಭವಗೃಹಂಶ್ರೀನಾಭಿಯಾಯ್ತ್ತೂರ್ಜ್ಜಿತಶ್ರೀಪತ್ನೀ
[3] ಪ್ರಥಮಾಸ್ಪದಂವಿಪುಳವಕ್ಷಂತಾನದಾಯ್ತೆಂದೊಡಿಂನಾಪೂರ್ಣ್ಣೋಂನತಕೇಶವಪ್ರಭುತೆಯಂ
[4] ಬಣ್ಣಿಪ್ಪನೇವಂಣ್ಣಿಪಂ || ಜಳಜಾತೋದ್ಭವಪುತ್ರನತ್ರಿತದಪತ್ಯಂಸೋಮನಾಧಾರಿಣೀತಿಳಕೋದ್ಭೂತಪು
[5] ರೂರವಂತದವನೀಪಾಲಾತ್ಮಜಾಯುರ್ಮ್ಮಹೀತಳನಾಥನ್ನಹುಷಂಯಯಾತಿಯದುತತ್ಖ್ಯಾತಾನ್ವ
[6] ಯೋರ್ವ್ವೀಶರೊಳ್ಸಳನೆಂಬಂನೃಪನಾದನುದ್‌ಭವಕರಂಗಾಂಭೀರ್ಯ್ಯರತ್ನಾಕರಂ || ಅನವದ್ಯಂಮಂತ್ರ ವಿದ್ಯಾಪರಿಣತನಭಯಂದಿವ್ಯ
[7] ಯೋಗೀಂದ್ರನೊರ್ಬ್ಬಂತನಗಾತಂನಮ್ನನಾಗಲ್ಸಳನೃಪನವನಂನೋಡಿಸಾಂಮ್ರಾಜ್ಯಮಂಮಾಳ್ಪೆನೆನು ತ್ತಂಮೋಹದಿಂದಂಶ
[8] ಶಕಪುರದವಾಸಂತಿಕಾದೇವಿಯಂಪುಣ್ಯನಿಧಾನಂಯುಕ್ತಪೂಜಾಪರಿಕರವಿಧಿಯಂನಿಶ್ಚಳಂಸಾಧಿಪಂನಂ|| ಅದನೆತ್ತಂವಿ
[9] ಘ್ನಮಂಮಾಡುವಬಗೆಮಿಗೆಶಾರ್ದ್ದೂಳನಾಕಾರದಿಂಪೊಯ್ವುದುಮಾಗಳ್‌ಯೋಗಿನೀಂಪೊಯ್ಸಳಯೆನೆ ಸುಭಟಂನಿಶ್ಚಳಂಬೆತ್ತದಿಂಪೊ
[10] ಯ್ವುದುಮಾಯ್ತ್ತಾಪೊಯ್ಸಳಾಂಕಂಯದುನೃಪರೊಳೆದೇವೀಪ್ರಸಾದೋದ್ಭವಶ್ರೀವಿದಿತಂಶಾರ್ದ್ದೂಳ ದೊಳ್ಕೂಡಿದಸೆಳೆಪಿರಿದುಂ
[11] ಚಿಹ್ನಮಂದೀದಮಿತ್ತಲ್ || ಕಂದ || ಹುಲಿಯುಂಡಿಗೆಯುಂಸೆಳೆಯುಂಸಲೆತಂಮೊಳೆಚಿಹ್ನಮಾಗೆಯದು ವಂಶದೊಳುಜ್ವಳಕೀ
[12] ರ್ತ್ತಿಗಳರಿನೃಪಸಂಕುಳಮರ್ದ್ದನಶೌರ್ಯ್ಯಶಾಲಿಗಳ್ಪಲರೆಸೆದರ್ || ವೃತ್ತ || ವಿನಯೇಂದೂಜ್ವಳಕೀರ್ತ್ತಿ ಸಜ್ಜನಸುಧಾಂಭೋರಾಶಿ

13 ಯಂಪೆರ್ಚ್ಚಿಸಲುಘನಶೌರ್ಯ್ಯಾರ್ಕ್ಕಮರೀಚಿದುರ್ದ್ದಮರಿಪುಶ್ರೇಣೀತಮಸ್ತೋಮಖಂಡನಮುಂಮಾಡೆ
ವಿನೀತವೃತ್ತಿನಿಜಶೌ

14 ರ್ಯ್ಯಾಟೋಪದಿಂದಗ್ಗಳಂವಿನಯಾದಿತ್ಯನೃಪಾಳನೆಂಬೆಸಕದಿಂದಾತಂತದಾಮ್ನಾಯದೊಳ್ || ತದಪ
ತ್ಯಂವೀರವೈರಿಕ್ಷಿತಿಪನಿಕರ

15 ಸಂಗ್ರಾಮದೊಳುನಿರ್ಜ್ಜಿತಪ್ರೋನ್ಮದದಂತಿಬ್ರಾತಕುಂಭಸ್ಥಳಮನಡಱ್ದುದೋರ್ದ್ದಂಡಚಂಡಾಸಿಯಿಂಪೊ
ಯ್ವುದುಮಲ್ಲಿಂದುಣ್ಮಿಮು

16 ಕ್ತಾವಳಿಜಯಲಲನಾಕಂಠಿಕಾಮಾಲೆತಾನಾದುದೆನಲ್ವಿಕ್ರಾಂತದಿಂದಾರೆಱೆಗನೃಪನೊಳಾಂಪುದ್ಧತ
ಕ್ಷೋಣಿಪಾಳರ್ || ಆತನ

17 ಕಾಂತೆಯೆಂತೆನೆಜಗತ್ತಳದೊಳ್ಕಮನೀಯಕಾಮಿನೀವ್ರಾತಮನೆಯ್ದೆನಿರ್ಮ್ಮಿಸಿವಿರಿಂಚಿಜಿತಶ್ರಮನಾಗಿ
ತಂನವಿಜ್ಞಾತಸದರ್ತ್ಥಮಿಂತಿದೆನಿ

18 ಪಂತಿರೆನಿರ್ಮ್ಮಿಸಿದಂಗಡೆಂದೊಡೇಮಾತೊಮೃಣಾಳಕೋಮಳೆಯನೇಚಲದೇವಿಯನೆಂತುಬಣ್ಣಿಪರ್ ||
ಅಂತಾದಂಪತಿಗಳ್ಗಿವು

19 ಟ್ಟಿವಿನಯಂಬೆರ್ತ್ತಿರ್ದ್ದಬಲ್ಲಾಳಭೂಕಾಂತಂವಿಶ್ರುತವಿಷ್ಣುಭೂಪನುದಯಾದಿತ್ಯಾವನೀಪಾಲಕಂಭ್ರಾಂ
ತೇನಾಂತರನಿಕ್ಕಿಬಂದುಶ

20 ರಣೆಂದಾನಮ್ನರಂಕಾದುಕಯ್ಯಾಂತರ್ಗ್ಗಿತ್ತುಶರತ್ಯಶಾಂಕವಿಶದಪ್ರಖ್ಯಾತಿಯಂತಾಳ್ದಿದರ್ || ಅವರೊಳ್ಮ
ಧ್ಯಮನಾಗಿಯುಂ

21 ವಿನಯದಿಂದತ್ತ್ಯುತ್ತಮಂತಾನೆನಿಪ್ಪವಿಶೇಷೋಂನತಿವೆತ್ತನುದ್ಧತವಿರೋಧಿಕ್ಷೋಣಿಪಾಲಬ್ರಜಾಹವಕಂ
ಠೀರವಶೌರ್ಯ್ಯ

22 ನಪ್ರತಿಮಕಾಂತಾನೀಕನೇತ್ರೋತ್ಪಲೇಂದುವಿಭಾಸೋಜ್ವಳಮೂರ್ತ್ತಿಮನ್ಮಥನಿಭಂಶ್ರೀವಿಷ್ಣುಭೂಪಾಳ
ಕಂ || ತತ್ತನೆಯಂನರಸಿಂ

23 ಹನೃಪೋತ್ತಮನುದ್ಯತ್ಪ್ರತಾಪನಹಿತನೃಪಾಳೋನ್ಮತ್ತೇಭಕುಂಭಿದಳನಾಯತ್ತಾಯತಖಳ್ಗಕಳಿತನಿಜ
ದೋರ್ದ್ದಂಡಂ || ನರಸಿಂಹಾವ

24 ನಿಪನಪಿರಿಯರಸಿಕನತ್ಕನಕಕಳಶನಿಭಪೀನಪಯೋಧರೆಪಟ್ಟಮಹಾದೇವಿತನೂದರಿಯೇಚಲದೇವಿರೂಪ
ವತಿರತಿಯೆನಿಪಳ್ || ನರಸಿಂಹೋ

25 ರ್ವ್ವೀಶಕಾಂತಾತ್ಮಜನುರುತರಧರ್ಮ್ಮೋಲ್ಲಸದ್ದುಗ್ಧನೀರಾಕರರಾಕೇಂದೂಪಮಾನಂನಳನಹುಷದಿಳೀ
ಪಾದಿಭೂಪಾಲಕೋದ್ಯಚ್ಚರಿತಂದೋರ್ದ್ದರ್ಪ್ಪವೈರಿಕ್ಷಿತಿ

26 ಪನಿಕರಸಂಗ್ರಾಮಕೇಳೀವಿನೋದಂಪರಿಭಾಸ್ವತ್ಕೀರ್ತ್ತಿವಲ್ಲೀವಳಯಿತಭುವನಂವೀರಬಲ್ಲಾಳಭೂಪಂ ||
ಶ್ರೀಕಾಂತಾದೃಢಸಂಗಮೋಪಜನಿತಾಹ್ಲಾ

27 ದಂಭುಜೋಪಾರ್ಜ್ಜಿತೋರ್ವ್ವೀಕಾಂತಾರಮಣಂದ್ವಿಷದ್ಬಲಿಕುಲಪ್ರಧ್ವಂಸನೋಪಾಯಶೌರ್ಯ್ಯಾಕೀ
ರ್ಣ್ಣೋಜ್ವಳಕೀರ್ತ್ತಿಮತ್ಸಮಗುಣಂತಾನೆಂದುರಕ್ಷಿಕ್ಕೆಲಕ್ಷ್ಮೀಕಾಂ

28 ತಂವಿಜಯಾವಹಪ್ರಣಯಿಯುಂಬಲ್ಲಾಳಭೂಪಾಳನಂ || ಉರಗೇಂದ್ರಂಧಾತ್ರಿಯಂಧಾರಿಣಿಹಿಮಗಿರಿ
ಯಂಹಿರ್ಮ್ಯಶೈಳಂಕು

29 ಭೃಜ್ಜಾವರನಂಗೌರೀವರಂಚಂದ್ರನನಮಳಿನಚಂದ್ರಂಕಳಾಸ್ತೋಮಮುಂನಿರ್ಬ್ಭರದಿಂದಂತಾಳ್ದುವಂತಪ್ರ
ತಿಮಯದುಕುಳೋದ್ಭೂತಸಾಂಮ್ರಾಜ್ಯಲಕ್ಷ್ಮೀಭರ

30 ಮಂಹೇಳಾಸುಸಾಧ್ಯಂತನಗೆನೆತಳೆದಂವೀರಬಲ್ಲಾಳಭೂಪಂ || ಕರಿನಕ್ರಾಭೀಳಹೇಷಾರವಯುತಹಯ
ಸಂದೋಹವೀಚೀಪದಾತಿಸ್ಫು

31 ರದುತ್ಪಾರೀನಕೋಳಾಹಳಸಮರಮಹಾಂಬೋಧಿಯೊಳ್ತಂನದೋರ್ಮ್ಮಂದರದಿಂದಂಮನ್ಥನಾರಂಭಮ
ನೊದವಿಸಿವೈರಿಕ್ಷಮಾಪಾಳಲ
32 ಕ್ಷ್ಮೀಕರಿಜಾತ್ಯಶ್ವಂಗಳಂಕೊಂಡತುಳಬಳಯುತಂವೀರಬಲ್ಲಾಳಭೂಪಂ || ಸುರರಾಜೇಭಂಮದಾನ್ಧಂಮ
ಧುಪಕುಳಯುತಂಪುಂಡರೀಕಂಸದಾ
33 ನೀಚರತಂಗಂಗಾಹ್ರದಂಚಂದ್ರನರುಚಿಸಲೆದೋಷಾವಿಳಂತಾನೆನಲ್ಪೇಳ್ದೊರೆಯೇಬಲ್ಲಾಳಭೂಪಾಳನ
ವಿಶದಯಶೋಲಕ್ಷ್ಮಿ
34 ಯೊಳ್ವರ್ಣ್ಣಸಾಮ್ಯಂಪಿರಿದುಂತಾನಾದೊಡಂನಿರ್ಮ್ಮಳಗುಣದಿನವಂಪೋಲಿಸಲ್ಬಲ್ಲನಾವಂ || ಸ್ವಸ್ತಿ
ಸಮಧಿಗತಪಂಚಮಹಾಶಬ್ದಮಹಾಮ
35 ಣ್ಡಳೇಶ್ವರಂದ್ವಾರವತೀಪುರವರಾಧೀಶ್ವರಂಯಾದವಕುಳಾಂಬರದ್ಯುಮಣಿಸಮ್ಯಕ್ತ್ವಚೂಡಾಮಣಿಶಶಕ
ಪುರವಾಸಂತಿಕಾದೇವೀಲಬ್ಧ
36 ವರಪ್ರಸಾದಂಮೃಗಮದಾಮೋದಂ | ವಿನಮಿದಹಿತಮಹಿಪಚೂಡಾಲೀಢನೂತ್ನರತ್ನರಶ್ಮಿಜಾಳಜಟಿಳಿತ
ನಖಕಿರಣಂ |
37 ಚತುಸ್ಸಮಯಸಮುದ್ಧರಣಂ | ಹಿರಣ್ಯಗರ್ಬ್ಭತುಳಾಪುರುಷಪ್ರಮುಖಮಖಶತಮಖಂ | ರಾಜವಿದ್ಯಾ
ವಿಳಾಸಿನೀಸಖಂ | ಇಂದುಮಂದಾಕಿನೀ
38 ಗುಣಯೂಥಂ | ಗಂಡಗಿರಿನಾಥಂ | ತಳಕಾಡುಕೊಂಗುನಂಗಲಿಗಂಗವಾಡಿಮಂಸವಾಡಿಹಲಸಿಗೆಹು
ಲಿಗೆಱೆಬನವಸೆಹಾನುಂಗಲ್ನೊಳಂಬ
39 ವಾಡಿಗೊಂಡಭುಜಬಳವೀರಗಂಗನಸಹಾಯಶೂರನಿಶ್ಶಂಕಪ್ರತಾಪಹೊಯ್ಸಳಬಲ್ಲಾಳದೇವರುಹಿಮಸೇ
ತುಮರ್ಯ್ಯಾದೆಯಾದಭೂಮಿಯಂ
40 ದುಷ್ಟನಿಗ್ರಹಶಿಷ್ಟಪ್ರತಿಪಾಲನದಿಂರಕ್ಷಿಸುತ್ತಂದೋರಸಮುದ್ರದನೆಲೆವೀಡಿನೊಳ್ಸುಖಸಂಕಥಾವಿನೋದ
ದಿಂಪೃಥ್ವೀರಾಜ್ಯಂಗೆಯ್ಯುತ್ತು
41 ಮಿರೆತದೀಯಪಾದಪದ್ಮೋಪಜೀವಿಗಳಪ್ಪಶ್ರೀಮದರಸಿಯಕೆಱೆಯರಾಜಾಧ್ಯಕ್ಷದಹೆಗ್ಗಡೆಗಳಮಹಾಜ
ನಂಗಳಮಹಾಮ
42 ಹಿಮೋಂನತಿಯೆಂತೆನೆ || ಶ್ರೀಮನ್ಮಹಾಪ್ರಧಾನಶಿಖಾಮಣಿಭಂಡಾರವಾಡದಧಿಪಂಲಕ್ಷ್ಮೀರಾಮಾಧಿಪ
ಭವನಮನಭಿರಾಮತೆಯಿಂಹರಿಹರಾ
43 ರ್ಯ್ಯವಿಭುಮಾಡಿಸಿದಂ || ಕ್ಷೀರಾಂಭೋರಾಶಿಯಂಶ್ರೀಕರವೆನಿಪತಟಾಕಂಮುನಿಶ್ರೇಷ್ಠರಂವಿಪ್ರಾರಾಧ್ಯ
ರ್ಕ್ಕಳ್ಪವಲ್ಲೀವೃತವಿಳಸನಮುಂನಾಗವಲ್ಲೀವನಂಭೃಂ
44 ಗೀ . ವಸ್ಪಂದಿಕಳ್ಪದ್ರುಮಮನೆಸೆವಚೂತಾದಿಗಳುಲಕ್ಷ್ಮಿಯಂತದ್ವಾರಸ್ತ್ರೀಸಂಕುಲಂಪೋಲ್ವರಸಿಯಕೆ
ಱೆಯೊಳ್ಶೋಭಿಕುಂಶ್ರೀಶಗೇಹಂ ||
45 ಮನುಮಾರ್ಗ್ಗಂಮಂತ್ರಿಮುಖ್ಯಂಹರಿಹರವಿಭುಗಂಬಾಗಿಯಕ್ಕಂಗವಾದರ್ತ್ತನೆಯುರ್ಬ್ಭಂಡಾರವಾಡಕ್ಕ
ಧಿಪರವರದಾರೆಂದಪೈರೇವಣಾಂಕಂವಿನಯಾಢ್ಯಂ
46 . . ಜಂವರಬುಧನಿಧಿನಾರಾಯಣಂನಾಗದೇವಂಘನಶೌರ್ಯ್ಯಂಕೇಶವಾರ್ಯ್ಯಂಪರಹಿತಚರಿತಾಭ್ಯಾ
ಸರುದ್ಯದ್ವಿಳಾಸರ್ || ಶ್ರೀವಧು
47 . . . . ಗೃಹಮಾದುದುರಸ್ಥಳಮೊಳ್ಪುವೆತ್ತವಾಕ್ಶ್ರೀವಧುವಿಂಗೆಸಂಗಮಸುಖಾಸ್ಪದವಾಯ್ತು
ಮುಖಾಂಬುಜಂಜಯಶ್ರೀವಧುವಿಂ
48 . . ಶ್ವತನಿಕೇತನಮಾದುದುತೋಳೆನಲ್ಯಶಶ್ರೀವನಿತಾಧಿಪಂವಿಬುಧರೇವಣಮಂತ್ರಿಯದೆಂತುಮೊ
ಪ್ಪುವಂ || ಅಧಿದಯ್ವಂಕೇಶ
49 . . ತನಖಿಳಜಗತ್ಖ್ಯಾತೆಬಾಗವ್ವೆತಾಯ್ವಿಶ್ವಧರಾಸ್ತುತ್ಯಾತ್ರಿಗೋತ್ರಪ್ರಭುಹರಿಹರಮಂತ್ರೀಶ್ವರಂತಂ
ದೆರಕ್ಷಿಪ್ಪಧಿಪಂಬಲ್ಲಾಳಭೂಪಂಜ

50 ಳಧಿವಳಯಿತಾಶೇಷಭಂಡಾರವಾಡಕ್ಕಧಿನಾಥಂತಾನೆನಲ್ಮತ್ತಿತರರಳವಿಯೇರೇವಣಂದೇವಸತ್ವಂ || ಜನಕಂಶ್ರೀಮಾಚಭಟ್ಟಪ್ರಭುಜನನಿ

51 . . ಸ್ತುತ್ಯೈಮಾರವ್ವೆಪೆಂಪುಳ್ಳನುಜರ್ಬ್ಬಲ್ಲಯ್ಯನುಂಮಾಧವನುಮೊಸೆದುರಕ್ಷಿಪ್ಪಬಲ್ಲಾಳಭೂಪಾಳನಧೀಶಂದೇವದೇವೋತ್ತಮವಿಭುಕಲಿದೇವೇಶನಾರಾಧ್ಯದ

52 ಯ್ವಂತನಗೆಂದಂದೇನೊಸಾಮಾನ್ಯನೆವಿಶದಯಶೋವಲ್ಲಭಂಕೇತಮಲ್ಲಂ || ಸ್ಥಿರಸತ್ವಾಧಿಷ್ಠಿತಂತ್ಯತುಳವಿಜಯಲಕ್ಷ್ಮೀವಧೂವಲ್ಲಭಂಗಾದರದಿಂದಂಕೇ

53 ತಮಲ್ಲಂಗೆಸೆವಜಸಕೆನಲ್ಲಂಗೆಬಲ್ಲಾಳಭೂಪಂನಿರುತಂಭಂಡಾರವಾಡಕ್ಕಧಿಪತಿಪದಮಂಕೊಟ್ಟನಾಚಂದ್ರತಾರಂಬರಮೆಂದಂದುದ್ಘಪುಣ್ಯಾಸ್ಪದನಮ

54 ಹಿಮೆಯಂಬಣ್ಣಿಸಲುಬಲ್ಲನಾವಂ || ಮಾರಂಗೆಸಾಂಗಮದನಾಕಾರಂಗೆಪರಾಂಗನಾವಿದೂರಂಗೆಸದಾಧೀರಂಗೆಸಕಳವಿಬುಧಾಧಾ

55 ರಂಗೆಸಮಾನರೆನಿಪಮಾನವರೊಳರೇ || ವಿಧುವಿಶ್ರುತವಿಶದಯಶೋವಧೂಧವಂಮಾರಮಂತ್ರಿಚೂಡಾಮಣಿತಾನಧಿಕಾರಂಗೆಯ್ವಂರಾಜಧಾನಿಭಂಡಾರವಾ

56 ಡದರಸಿಯಕೆಱೆಯೊಳ್ || ಪದೆದುನಿಜೇಶನುಂಪ್ರಜೆಗಳುಂಪರಿವರ್ಣ್ಣಿಸಲೆಕ್ಕದಲ್ತೆತಪ್ಪದೆನಡೆಯಲ್ಕೆನಿಂನಪೆಸರೇಗಣಕಾಗ್ರಣಿಕೇಸಿರಾಜನೆಂಬುದೆಹ

57 ರಿದೇವಮಂತ್ರಿಸುತನೆಂಬುದೆಪೊಯ್ಸಳಗಂಧಹಂಸಿಯೆಂಬುದೆವರವಾಜಿವಂಶವಿಭುವೆಂಬುದೆಗೋತ್ರಪವಿತ್ರನೆಂಬುದೇ || ಭೂಕಾನ್ತಂಬಲ್ಲಾ

58 ಳಂಶ್ರೀಕೇಶವವಿಭುಗೆಮೆಚ್ಚಿಮುದದಿಂಕೊಟ್ಟಂಶ್ರೀಕರಣಮನೂರ್ಜ್ಜಿತಲಕ್ಷ್ಮೀಕರಭಂಡಾರವಾಡವೆನಿತನಿತಕ್ಕಂ || ಶ್ರೀದೈತರ್ನ್ನಿತ್ಯಸತ್ವರ್ನ್ನಿಖಿಳ

59 ಗುಣಯುತರ್ನ್ನಿರ್ಮ್ಮಳರ್ನ್ನೀತಿವಂತರ್ವ್ವೇದಾನುಷ್ಠಾನಯುಕ್ತರ್ಪ್ರಭುಗಳಭಿಮತಾರ್ತ್ಥಪ್ರದರ್ಕ್ಕೇಶವಶ್ರೀಪಾದಾಬ್ಜಾಮೋದಭೃಂಗರ್ಬ್ಭುವನಜ

60 ನನುತರ್ಸ್ಸರ್ವ್ವಶಾಸ್ತ್ರಪ್ರವೀಣರ್ಬ್ಭೂದೇವರ್ಮ್ಮಾಡೆಚೆಲ್ವಾಯ್ತರಸಿಯಕೆಱೆಯೊಳ್ಕೇಶವೋತ್ತುಂಗವಾಸಂ || ಅಗಲಕ್ಕಿಟ್ಟೆಡೆಯಾಯ್ತುದಿಕ್ಪ್ರತತಿ

61 ಗಳ್ತಾವೆಂಬಿನಂನೀಳವಾಮುಗಿಲೊಳ್ಕಾಳಸೆಗೊಂಡುದೆಂಬಿನೆಗಮಂತಾಕಳ್ಪಮಿಪ್ಪಂನೆಗಂನರಸಂದೋಹಮನಬ್ಜಜಂಕಡೆದುತಂದಿಟ್ಟಂತೆವೋ

62 ಲ್ನಾಡೆಯುಂಸೊಗಯಿಪ್ಪಂನತಕೇಶವಾಯತನಮಂವಿಪ್ರೋತ್ತಮರ್ಮ್ಮಾಡಿದರ್ || ಸ್ಥಿರಸತ್ವಶ್ರೀರಮಣರ್ಪ್ಪುರುಷೋತ್ತಮರಾದಿಪುರುಷಚರಿ

63 ತರ್ಲ್ಲಕ್ಷ್ಮೀವರಕೇಶವಮೂರ್ತ್ತಿಗಿಳಾಮರೋತ್ತಮರ್ಸ್ಸುಪ್ರತಿಷ್ಠೆಯಂಮಾಡಿಸಿದರು || ಸ್ವಸ್ತಿಶ್ರೀಮತ್ಶಕವರ್ಷ ೧೧೧೫ನೆಯವಿಜಯಸಂವ

64 ತ್ಸರದಶ್ರಾವಣಶುದ್ಧೈಕಾದಶಿಯಾದಿತ್ಯವಾರದಂದುಶ್ರೀಮನ್ಮಹಾಮಣ್ಡಳೇಶ್ವರಂಹೊಯ್ಸಳವೀರಬಲ್ಲಾಳದೇವರುಪಟ್ಟಬಂಧೋತ್ಸ

65 ವಶುಭಮುಹೂರ್ತ್ತದೊಳುಶ್ರೀಮದ್ರಾಜಧಾನಿಭಂಡಾರವಾಡದರಸಿಯಕೆಱೆಯಜಯಂಗೊಂಡಬಲ್ಲಾಳಪುರದಮಹಾಪ್ರಸಂನಚೆಂನಕೇಶವದೇ

66 ವರಂಗಭೋಗಕ್ಕಂನಿತ್ಯನಿವೇದ್ಯಕ್ಕಂನಂದಾದೀವಿಗೆಗಂಖಂಡಸ್ಫುಟಿತಜೀರ್ಣ್ಣೋದ್ಧಾರಕ್ಕಂಪೂಜಾರಿಪರಿಚಾರಕರಜೀವಿತಕ್ಕಂಚೈತ್ರಪವಿತ್ರೋತ್ಸವಕ್ಕವಾಗಿಮಹಾಪ್ರಧಾನರ್ರಾ

67 ಜಧ್ಯಕ್ಷದಹೆಗ್ಗಡೆಗಳಸಂನಿಧಿಯೊಳುಸ್ವಸ್ತಿಯಮನಿಯಮಸ್ವಾಧ್ಯಾಯಧ್ಯಾನಧಾರಣಮೋನಾನುಷ್ಠಾಣಜಪಸಮಾಧಿಶೀಲಗುಣಸಂಪಂನರುಂಶಾ

68 ಪಾನುಗ್ರಹಸಮರ್ತ್ಥರುಮಪ್ಪರಸಿಯಕೆಱೆಯಶೇಷಮಹಾಜನಂಗಳಕಾಲಂಕರ್ಚ್ಚಿಧಾರಾಪೂರ್ವ್ವಕಂಮಾಡಿಬಿಟ್ಟದತ್ತಿಹಿರಿಯಕೆಱೆಯಮೂ

69 ಡಗೋಡಿಯಬಯಲನಡುಸ್ಥಳದಗದ್ದೆಸಲಗೆಏಳ೭ಕ್ಕಂಕಂಬವಿಂನೂಱೆಂಭತ್ತು೨೮೦ | . . . ಗೆಱೆಯಮೂಡಗೋಡಿಯಗದ್ದೆಸ೭ಕೊ೧೫ಕಂಬ೨೭೦

70 ಕಂಬವಿಂನೂಱನಾಲ್ವತ್ತು ೨೪೦ | ಗೋವಿಂದದೇವನಗದ್ದೆವೂರಿಂಮೂಡಲುಕಂಬವೆಂಭತ್ತು೮೦ | ಹಳ್ಳದಿಂಹಡುವಲಪ್ಪಜ್ಜರತೋಟಕಂಬವಿಪ್ಪತ್ತಮೂಱು೨೩ |

71 ಊಳಿಗದಗೋವಿನ್ದಂಣನತೋಂಟಹಿರಿಯಬಾಯ್ಕಾಲಿಂಹಡುವಲುಕಂಬಮೂವತ್ತು೩೦ | ಸೋವಜ್ಜರಮಹದೇವನತೋಂಟಬ್ರಾಹ್ಮಣರಬಯಲಲ್ಲಿಕಂಬವಿ

72 ಪ್ಪತ್ತಮೂಱು೨೩ಊರಿಂನ್ಯೈರಿತ್ಯದಕಿಱುವೊಱಡಿಯಿಂಬಡಗಬೆದ್ದಲೆಕಂಬಮೂನೂಱು ೩೦೦ವರ್ಷಂಪ್ರತಿಪ್ರಜೆಗಾವುಂಡುಗಳುಕೊಡುವಗ

73 ದ್ಯಾಣ೧ಮಾನೆಣ್ಣೆಗೆತ್ತುಗಾಣ ೧ ಕಯ್ಗಾಣ ೧ ನಕರಮುಂನಾನಾದೇಶಿಯುಂಬಿಟ್ಟಾಯಅಡಕೆಯಹೇಱೊಂದ ೧ಕ್ಕೆಬೇಳೆ ೧ ಎಲೆಯಹೇ

74 ಱೊಂದ ೧ಕ್ಕೆವೀಸ ೧ದವಸದಹೇಱೊಂದ ೧ಕ್ಕಂಬಳ್ಳ ೧ಬಂದಪೆಳಿಯಮಳವೆ ೧ಕ್ಕೆಹಾಗವೆರ ೨ಸಂತೆಯಲ್ಸೆಡೆಯಕ್ಕಿ | ಎಂಣ್ಣೆಯಕೊಡ೧ಕ್ಕೆ

75 ಸೋಂಟಗೆಗಬಲೆಮೆಳಸರಿಸಿನದಮಳವೆಗಳ್ಗೆ ಹಾಗ ೧ನಿತ್ಯಪಡಿಯಹೂವಿಂಗೆಬಡ್ಡಿಯಿಂನಡವಂತಾಗಿದೇವರ್ಗ್ಗೆದಾಮಜ್ಜರನಾರಾಯಣ

76 ದೇವಕೊಟ್ಟಗದ್ಯಾಣ ೧ಆಪಡಿಯಿಂಸಂಜೆಸೊಡರೆಂಣೆಗಾನಾರಾಯಣದೇವಕೊಟ್ಟಗದ್ಯಾಣ ೧ಆಪಡಿಯಿಂಹೂವಿಂಗೆಹಿರಿಯಕುಪ್ಪಯ್ಯ

77 ಕೊಟ್ಟಗದ್ಯಾಣ ೧ಮಸಣಿಸೆಟ್ಟಿಹೂವಿಂಗೆಕೊಟ್ಟಗದ್ಯಾಣ ೧ಸೋವಜ್ಜರಮಹಾದೇವಸೊಡರೆಂಣೆಗೆಕೊಟ್ಟಗದ್ಯಾಣ ೧ಸೋ

78 ವಜ್ಜರನಾರಾಯಣದೇವನೆಂಣೆಗೆಕೊಟ್ಟಗದ್ಯಾಣ ೧ಚಾಗಿಹಳ್ಳಿಯಕಲೆಯನೆಣ್ಣೆಗೆಗದ್ಯಾಣ ೧ಈಸ್ಥಳದಸುಂಕದಹೆಗ್ಗಡೆಗಳುವರ್ಷಂ

79 ಪ್ರತಿಕೊಡುವಗದ್ಯಾಣ೧ಇಂತೀಧರ್ಮ್ಮವಪ್ರತಿಪಾಳಿಸಿದವರುಗಂಗೆವಾರಣಸಿಕುರುಕ್ಷೇತ್ರದಲುಸಹಸ್ರಕವಿಲೆಯ

80 ಸಹಸ್ರಬ್ರಾಹ್ಮಣರ್ಗ್ಗೆಕೊಟ್ಟಫಲಮಂಪಡೆವರು || ಈಧರ್ಮ್ಮವಂಕೆಡಿಸಿದವರಾತೀರ್ತ್ಥದೊಳಾಕವಿಲೆಯುಮಂಬ್ರಾಹ್ಮಣರುಮಂಕೊಂದನರಕಕಿಳಿವರು ||

81 ಸ್ವದತ್ತಾಂಪರದತ್ತಾಂವಾಯೋಹರೇತವಸುಂಧರಾಷಷ್ಟಿರ್ವ್ವರ್ಷಸಹಸ್ರಾಣಿವಿಷ್ಠಾಯಾಂಜಾಯತೇಕ್ರಿಮಿ || ಯಾದವಪತಿಬಲ್ಲಾಳಂಶ್ರೀದಂಹ

82 ದಿನಯ್ದು ೧೫ಪೊಂಗೆನಡುಬಯಲಂಪಿಂಡಾದಾನವಾಗೆಕೊಟ್ಟಂಭೂದೇವೋತ್ತಮರ್ಗ್ಗೆಸೊಗಯಿಪರಸಿಯಕೆಱೆಯೊಳು || ಭುವನನು

83 ತವಾಜಿವಂಶೋದ್ಭವಕರವಿಭುಸೋಮನಾಥಪುತ್ರಂಪೇಳ್ದಂಕವಿರಾಜಂಕಾಶ್ಯಪಗೋತ್ರವರ್ದ್ಧನಂದೇವಪಾರ್ಯ್ಯನೀಶಾಸನಮಂ ||

84 ಸಮವೃತ್ತಶ್ಲೋತಂಗಳುಸಮಸ್ತಸಂಪತ್ಕರಂಗಳತಿನಿಬಿಡಂಗಳುಕಮನೀಯಮೃದುಸುರೇಖಾರಮಣಿಂಗಳುನೆಗಳ್ದಬಸವರಾಜನಬರಪಂ ||

ಹಿಂಭಾಗ.

85ಸೋಮೇಶ್ವರಭಟ್ಟರಮಾಧವದೇವನುಹೂವಿಂಗೆಗ ೧ ವಿಶಿಷ್ಟಪೂಜೆಗೆಗ ೨ ಹಾಲಿಗೆಗ ೧
86ತುಪ್ಪಕೆಗ ೧ ಆಮಧುಸೂದನದೇವಗೆಂಣೆಗೆಗ ೨ ಬಾಚವ್ವೆಹೂವಿಗೆಗ ೧ ಎಂಣೆ
87ಗೆಗ ೧ ಬಾಚಕಬ್ಬೆಎಂಣೆಗೆಗ ೨ ಕುಪ್ಪಯ್ಯಗಳಶ್ರೀಧರಗ ೧ ವಿಪ್ರದಾ . ಮಾದಯ್ಯಗ ೧
88ಅತ್ತಿಯಮೆಯಹರಿಯಣಹೂವಿಗೆಗ ೧ ಆಮತಕೇಶವಹೂವಿಗೆಗ ೧ ಎಂಣೆಗೆಗ ೧
89ರಾಮೇಶ್ವರಭಟ್ಟರಮಗನಾರಾಯಣಭಟ್ಟರ್ಎಂಣೆಗೆಗ ೧ ಗಂಟೆಯಬಸವಗ ೧ ಚಾಮಗೌಡನಕಾಳೆ
90 . ಯಗ ೧ ಕಾಮೆಯಮಾರೆಯಪ ೫ ತಿಪ್ಪವೆಪ ೫ ಭೂಪ . ಗ ೧ . . ಬಸವಮತ್ತಂ
91ಎಂಣೆಗೆಗ ೫ ರೇಚವ್ವೆಎಂಣೆಗೆಪ ೫ ಕೇಶವದಾಸರಮಗದಾಮಯಹೂವಿಂಗೆಗ ೧ ಚಟ್ಟಮರಸ
92ರ . ತೆಯಎಂಣೆಗೆಗ ೧ ಆಮತೆಯಂಗಳಹೂವಿಂಗೆಗ ೧ ಆವಾಮನದೇವಹೂವಿಂಗೆ
93ಗ ೧ ಮಂನೆಯರಾಯರ್ಎಂಣೆಗೆಗ ೧ . . ಚಟ್ಟಗಳುಚೆಂನಕೇಶವದೇವರಮಧ್ಯಾಂನದ
94ಕರ್ಪ್ಪೂರದಾರತಿಗೆಗ ೧ ವೇದಾಂತಸ್ವಾಮಿಗಳುಂಕ್ರಿಷ್ಣಪೆದ್ದಿ . . ಚೆಂನಕೇಶವದೇವರಇರ್ಪ್ಪೂತ್ತ್ರಿನ
95ಕರ್ಪ್ಪೂರದಾರತಿಗೆಗ ೧ ಕೂಸಚೌಡೆಯನುಎಣ್ಣಿಗೆಗ ೧ ತಂದೆಯಬಸವಎಣ್ಣೆ
96ಗೆಕೊಟ್ಟಗ ೧ ಅಮರಗೌಡನೆಂಣ್ಣೆಗೆಗ ೧ ಚಾಮಗೌಡರಕಾಳೆಯನೆಂಣ್ಣೆಗೆಗ ೧ ಬೆಳ್ಳಿ
97ಯನಮಾರೆಯನೆಂಣ್ಣೆಗೆಗ ೧ ಚಾಮಗೌಡನಮಗಮಾದಗ ೧
98ಸೋಮೇಶ್ವರಭಟ್ಟರಮಾಧವದೇವನುಧರ್ಮ್ಮವನುನಡಸುವಂತಾಗಿಕೊಟ್ಟಗ ೯ ಚೆಂದುವ
99ಬ್ಬೆಮಾಳಗೌಡನಮದವಳಿಗೆಮಾಚಗೌಡಿಎಂಣೆಗೆಕೊಟ್ಟಗ ೨ ಎಡವಂಕದಗೋವಿಂದಸಾ
100ಹಣಿಯಮಗಬಂಮೆಯಸಾಹಣಿಎಣ್ಣೆಗೆಕೊಟ್ಟಗ ೧ ಸೇರಗುಬಿಯ
101ಬಂಮ್ಮಿಸೆಟ್ಟಿಎಣ್ಣೆಗೆಕೊಟ್ಟಗ ೨ ಚಿತ್ರಭಾನುಸಂವತ್ಸರದಪಾಲ್ಗುಣಬ ೧ ಬುಧವಾರದ
102ಂದುಆನೆಯಮಲೆಯನುಚೆಂನಕೇಸವದೇವರದೀವಿಗೆಎಂಣೆ ೧ ಗೆಕೊಗ ೨ ಆತನಮ
103ದವಳಿಗೆಹೊಂನವೆಕೊಟ್ಟಗ ೧ ಶ್ರೀಮನುಮಹಾಪ್ರಧಾನಂಬೇಬಯ್ಯನತಂಮ . . ಲ್ಲ
104ಯ್ಯದಂಣ್ನಾಯಕರುಸೊಡರೆಂಣ್ಣೆಗೆಕೊಟ್ಟಗ ೪ ಲಕ್ಷ್ಮೀನಾರಣದಾಸಿ
105ದೇವರಗೊಸಗೆಯಭಂಡಾರಕ್ಕೆಕೊಟ್ಟಗ ೮ ಬ್ಯಯಸಂವತ್ಸರದಜೇಸ್ಟಸು
106ಧದಲುಕೊಟಹೊಂನು

72

ಅದೇ ಕಲ್ಲಿನ ಹಿಂಭಾಗದಲ್ಲಿ ಮೇಲ್ಗಡೆ ಹೊಸದಾಗಿ ಬರೆದಿರುವದು.

107ಶ್ರೀಮತುಶಕವರುಷಸ೧೩೩೩ಖರಸಂವತ್ಸರದಆಶ್ವೀಜ . . . ಸೋಮವಾರದಲುಉದ್ಭವಸರ್ವ್ವಗ್ಣ
ವೀರವಿ
108ಜಯಬಲ್ಲಾಳಪುರವಾದಆರಸಿಯಕೆಱೆಯಶ್ರೀಮತ್ತುಮಹಾಪ್ರಸಂನ್ನಕೇಶವದೇವರಿಗೆದೇವರಸರಮ
ಕ್ಕಳು
109ಹಂಪೆಯರಾಯಹಡಪದಹರಿಯಣ್ಣಗಳುಹಡುವಾದೇಮಯಮಗನಂಜಿನ . ರನುಮಾಡಿಕೊಟ್ಟಗದ್ದೆ
ಕಲ್ಮೆಯ
110ಸಎರಡುದೀವ್ವಿಗೆಯುಕೂಡಿ
111ರ್ದ್ದಆರಸಿಯಕೆಱೆಯಮಹಾ
112 . . ಗಳಂಮಹಾಶ್ರೀಶ್ರೀಶ್ರೀ •

73

ಅದೇ ಕಲ್ಲಿನ ಬಲಭಾಗದಲ್ಲಿ.

113 ಸ್ವಸ್ತಿಶ್ರೀಸಕಕಾಲ ೧೧೨
114 . . ಸಲೆರಕ್ತಾಕ್ಷಿಸಂವತ್ಸರದ
115 ವೈಶಾಖದಪೌರ್ಣ್ಣಮಿಶು .
116 ರಾಜಧಾನಿಯುರಸೆಯಕೆಱೆ
117 ಯಶ್ರೀಚೆಂನಕೇಶವದೇವರನಿತ್ಯ
118 ಸಂಧ್ಯಾದೀಪೋತ್ಸವಂವೃದ್ಧಿಯಿಂ
119 ನಿಚ್ಚಲುಂನೂಱುದೀವಿಗೆನಡೆವಂ
120 ತುಸಕಳಭಕ್ತಜನಂಗಳುಂನೆರ
121 ದಾಮಹಾಜನಂಗಳವಶದಲೆ
122 ಧಾರಾಪೂರ್ವ್ವಕಂಮಾಡಿಬಿಟ್ಟ
123 ದತ್ತಿಅನನ್ತಯ್ಯಂಗಳುಗ ೧ ಆ
124 ವಾಮನದೇವಗ ೧ ಅಲ್ಲಾಳಪೆರುಮಾ
125 ಳದಾಸಗ ೧ ಮಧುಸೂದನದೇವ
126 ಗ ೧ ಮಾಧವದೇವಗ ೧ ವಿಷ್ಣುದೇ
127 ವಗ ೧ ಚಿಕತಮ್ಮಗ ೧ ಕೇಶವ
128 ದಾಸಗ ೧ ಚಿಕದೇವಯ್ಯಗ ೧
129 ರಾಯರಸನಸೋಮಯ್ಯಗ
130 . . ನಾಚಯ್ಯನಮಾದಯ್ಯಗ ೧
131 ಕ್ಷೀರಾಬ್ಧಿದಾಸಿಪ ೪ ಹ
132 ರಿಹರದಾಸಗ ೧ ಅತ್ತಿಯಮ್ಮೆ
133 ಯಹರಿಯಣಗ ೧ ಹೊಳಲ
134 ಕೆಱೆಯಬಮ್ಮಿಸೆಟ್ಟಿಗ ೧ ಗಂಗೆ
135 ಯಾಡಿಯಿಕವ್ವೆಗ ೧ ವಿಷ್ಣುದಾ
136 ಸಗ ೧ ತೊಳಚೆಯಮಾಧವ
137 ಗ ೧ ಆಮಾರೆಯಗ ೧ ವಚ್ಚಿಗ
138 ಬ್ಬೆಯಮಗಬಲ್ಲಿಸೆಟ್ಟಿಗ ೧ ದೇ
139 ಕೆಯಪ ೫ ದುಗ್ಗಿಯನಾಯ
140 ಕಪ ೫ ಬಿಲಿಸೆಟ್ಟಿಪ ೫ ಕೋಣ
141 ನಕಲ್ಲಚವುಡವೆಪ ೫ ಜೆಡಚಟಿ
142 ಯಪ ೫ ಕಲ್ಲೆಯನಾಯಕ
143 ನಮುದವಳಿಗೆಕೇತವೆನಾಯಕಿ
144 ತಿಗ ೧ ಎಱಿಹಿಸೆಟ್ಟಿಗ ೧ ಮತ್ತಂ
145 ಎಱಿಹಿಸೆಟ್ಟಿಹೂವಿಂಗೆಗ ೧ ಮ
146 ತ್ತಂಹೂದೋಟದಭೂಮಿಗೆಗ ೧
147 ಹನುಮದಾಸರುಗ ೧ ಮನೆಯ
148 ಹೊಂನವೆಪ ೫ ಮೈಲವೆಯಬರೆ .
149 ಬಾರಿಕಮಾರಪ೫

